ಸಂಪುಟ : 8 ಸಂಚಿಕೆ : 172 ಪುಟ : 4 ಬೆಲೆ : 3.00 ಶುಕ್ರವಾರ ಆಗಸ್ಟ್ 11, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 172 Pages : 4 Price : 3.00 Friday August 11, 2023 Gadag RNI No : KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಅವಳಿ ನಗರದಲ್ಲಿ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಶುಕ್ರವಾರ ನೀರು ಪೂರೈಕೆಯಾಗಲಿರುವ ಸ್ಥಳಗಳ ಮಾಹಿತಿ ಹೀಗಿದೆ.



ವಾರ್ಡ್ ನಂ.22ರ ವಿಜಯನಗರ ಶಾಲೆ, ಕರುಗಲ್ ಲೈನ್, ಶಿಗ್ಗಾಂವಿ ಲೇಔಟ್, ವಾಲ್ಮೀಕಿ ಭವನ, ಟವರ್ ಕಂಭದ ಲೈನ್, ವಾರ್ಡ್ ನಂ.34ರ ವಡ್ಡರಗೇರಿ, 36 ಪ್ಲಾಟ್, ವಡ್ಡರಗೇರಿ ಹಿಂದಿನ ಭಾಗ, ಮುಂದಿನ ಭಾಗ, ವಾರ್ಡ್ ನಂ.27ರ ಸಂಕನೂರ ಲೈನ್, ರೋಣದ ಲೈನ್, ಪೆಂಡರ್ ಓಣಿ, ಮಲ್ಲೇಶಪ್ಪನ ಲೈನ್, ನಂದರಗಿಯವರ ಲೈನ್, ಅಬ್ಬಿಗೇರಿ ಲೈನ್, ಬಕ್ಷಿಲೈನ್, ಬಚ್ಚಲಕ್ಕಮ್ಮನಗುಡಿ ಲೈನ್, ವಕ್ಕಲಗೇರಿ ಲೈನ್, ಕಿಲ್ಲಾ ಲೈನ್, ಗಾರಗಿಪೇಟೆ, ವಾರ್ಡ್ ನಂ.29ರ ರಾಜೀವಗಾಂಧಿ ನಗರ ಭಾಗ-1ರಿಂದ 9ರವರೆಗೆ, ವಾರ್ಡ್ ನಂ.20ರ ಬನ್ನಿಕಟ್ಟಿ ಭಾಗ-1, 2, ಕೊಟ್ಟೂರ ಭಾಗ-1, 2, ಹುಲಿಗೆಮ್ಮ ಗುಡಿ ಲೈನ್, ಸಂಕಪ್ಪಜ್ಜನ ಗದ್ದುಗಿ, ತೆರದಾಳ ಮುಂಡರಗಿ ಲೈನ್, ಖಾನತೋಟ, ಗೌಳಿಯವರ ಲೈನ್, ಭಾಗ-1, 2, 3, ವಾರ್ಡ್ ನಂ.16ರ ರಹಮತನಗರ ಭಾಗಗಳು, ವಾರ್ಡ್ ನಂ.11, 12ರ ಕರಿಯಮ್ಮನಕಲ್ಲು ಲೈನ್, ಇರಾಣಿ ಕಾಲೋನಿಯ ಭಾಗಗಳು, ವಾರ್ಡ್ ನಂ.33ರ ಜಾಕೀರ ಹುಸೇನ ಕಾಲೋನಿ, ಬ್ಯಾಂಕರ್ ಕಾಲೋನಿ, ಮುಳಗುಂದ ರೋಡ್, ವೀರೇಶ್ವರ ನಗರ, ವಾರ್ಡ್ ನಂ.28ರ ಅಬ್ಬಿಗೇರಿ ಲೈನ್, ಮಠದ ಮುಂದಿನ ಭಾಗ, ಕೃಷ್ಣಾ ಟ್ಯೂಶನ್ ಲೈನ್, ಚೋಳಾ ಪಾಟೀಲ ಅಪಾರ್ಟಮೆಂಟ್, ಎಸ್ ಎಸ್ ಪಾಟೀಲ ಕಟ್ಟಿ, ಟೀಚರ್ ಲೈನ್‌ಗಳಲ್ಲಿ ನೀರು ಪೂರೈಕೆಯಾಗಲಿದೆ.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗರಿಗೆದರಿದ ಕೃಷಿ ಚಟುವಟಿಕೆ: ಟ್ರ್ಯಾಕ್ಟರ್, ಯಂತ್ರೋಪಕರಣಗಳ ಬಾಡಿಗೆ ಏರಿಕೆ

# ಕೃಷಿ ಕಾರ್ಮಿಕರು, ಬಾಡಿಗೆ ಎತ್ತುಗಳಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು!!!!

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮುಂಗಾರು ಮಳೆಯ ವಿಳಂಬದ ನಡುವೆಯೂ ಕೃಷಿ ಚಟುವಟಿಕೆಗಳು ಬಿಡುವಿಲ್ಲದೆ ಸಾಗಿದ್ದು, ಬಾಡಿಗೆ ಎತ್ತು, ಟ್ರ್ಯಾಕ್ಟರ್ ಮತ್ತಿತರ ಕೃಷಿ ಯಂತ್ರಗಳಿಗೆ ಬೇಡಿಕೆ ಹೆಚ್ಚತೊಡಗಿದೆ. ಜುಲೈ ಮೊದಲ ವಾರ ಪ್ರಾರಂಭವಾದ ಜಿಟಿಜಿಟಿ ಮಳೆ 10-12 ದಿನಗಳ ಕಾಲ ಬಿಟ್ಟೂಬಿಡದೇ ಸುರಿದಿದೆ. ಈ ವೇಳೆ ಕೃಷಿ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡು, ಕಳೆ, ರೋಗಬಾಧೆ ಆವರಿಸಿದೆ. ಸದ್ಯ ಮುಂಗಾರಿನ ಪ್ರಮುಖ ಬೆಳೆ ಶೇಂಗಾ, ಹೆಸರು, ಹತ್ತಿ, ಗೋವಿನಜೋಳ, ಮೆಣಸಿನಕಾಯಿ ಸೇರಿ ಇತರೆಲ್ಲ ಬೆಳೆಗಳ ಎಡೆ ಹೊಡೆಯುವುದು, ಬಿತ್ತನೆ ಕಾರ್ಯ, ಹಿಂಗಾರಿನ ಕೃಷಿಗೆ ಜಮೀನು ಹದಗೊಳಿಸುವುದು, ಬಾಕಿ ಉಳಿದ ಬಿತ್ತನೆ ಕಾರ್ಯ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ಎತ್ತುಗಳ ಅಗತ್ಯವಿದೆ.



ಬಹುತೇಕ ಕೃಷಿ ಕಾರ್ಯಗಳಿಗೆ ರೈತರು ಟ್ರ್ಯಾಕ್ಟರ್ ಬಳಸುತ್ತಿದ್ದರೂ ಎಡೆ ಹೊಡೆಯುವ ಕಾರ್ಯಕ್ಕೆ ಎತ್ತುಗಳೇ ಬೇಕು. ಇದೀಗ ಮಳೆ ಬಿಡುವು ಕೊಟ್ಟಿದ್ದರಿಂದ ಎಲ್ಲ ರೈತರು ಎಡೆ ಹೊಡೆಯುವ ಕಾರ್ಯಕ್ಕೆ ಮುಂದಾಗಿದ್ದು, ಎಲ್ಲಡೆ ಎತ್ತುಗಳ ಕೊರತೆ ಎದ್ದು ಕಾಣುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಹಿಂಗಾರಿನ ಕೃಷಿ ಚಟುವಟಿಕೆ ಮುಗಿದ ಮೇಲೆ ರೈತರು ಎತ್ತುಗಳನ್ನು ಮಾರಾಟ ಮಾಡಿ, ಮತ್ತೆ ಮುಗಾರು ಹಂಗಾಮಿನಲ್ಲಿ ಖರೀಸುವ ಟ್ರೆಂಡ್ ಶುರುವಾಗಿದೆ. ಕೃಷಿಯಲ್ಲಿನ ನಷ್ಟದಿಂದ ರೈತರು ಮತ್ತೆ ಎತ್ತುಗಳನ್ನು ಖರೀಸಲು ಮುಂದಾಗಲಿಲ್ಲ. ಅನಿವಾರ್ಯವಾಗಿ ರೈತರು ಯಂತ್ರೋಪಕರಣ ಮತ್ತು ಬಾಡಿಗೆ ಎತ್ತುಗಳ ಮೊರೆ ಹೋಗಿದ್ದಾರೆ. ಬೇಡಿಕೆ ಸಾಕಷ್ಟಿರುವುದರಿಂದ, ಎತ್ತುಗಳನ್ನು ಹೊಂದಿರುವ ರೈತರಿಗೆ ಹೆಚ್ಚಿನ ಬಾಡಿಗೆ ಕೊಡಲು ಮುಂದಾಗುತ್ತಿದ್ದಾರೆ. ಮುಂಗಾರು ಪೂರ್ವದಲ್ಲಿ 1,200-1,500 ರೂ ಇದ್ದ ಎತ್ತುಗಳ ಒಂದು ದಿನದ ಬಾಡಿಗೆ ಸದ್ಯಕ್ಕೆ 2000 ರೂ ಮೀರಿದೆ.

> 2 ವರ್ಷ ಕೊರೊನಾ ಭೀತಿ, ಕಳೆದ ವರ್ಷ ಚರ್ಮಗಂಟು ರೋಗ ಬಾಧೆಯಿಂದ ಹಲವು ರೈತರ ಎತ್ತುಗಳು ಮೃತಪಟ್ಟಿವೆ. ಇನ್ನು ಕೆಲವರು ಹೊಟ್ಟು-ಸೊಪ್ಪಿಯ ಕೊರತೆಯಿಂದ ಎತ್ತುಗಳನ್ನು ಮಾರಾಟ ಮಾಡಿದ್ದಾರೆ. ಆದಾಗ್ಯೂ ಉತ್ತಮ ತಳಿಯ ಒಂದು ಜೊತೆ ಎತ್ತಿಗೆ 1 ಲಕ್ಷ ರೂ ವರೆಗೂ ಬೆಲೆ ಹೆಚ್ಚಿದ್ದರಿಂದ ರೈತರು ಎತ್ತುಗಳನ್ನು ಕೊಳ್ಳಲಾಗುತ್ತಿಲ್ಲ. ಬಹುತೇಕ ಕಾರ್ಯಕ್ಕೆ ಟ್ರ್ಯಾಕ್ಟರ್ ಬಳಸಿದ್ದರೂ ಎಡೆ ಹೊಡೆಯಲು, ಹತ್ತಿ, ಮೆಣಸಿನ ಬೆಳೆ ಸಾಲು ಮಾಡಲು ಎತ್ತುಗಳೇ ಬೇಕಾಗುತ್ತದೆ. ಆದ್ದರಿಂದ, ಬೇಡಿಕೆ ಹೆಚ್ಚಿದ್ದು ಬಾಡಿಗೆ ದರವೂ ಹೆಚ್ಚಳವಾಗಿದೆ. ಮೊದಲೇ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ರೈತರಿಗೆ ಎತ್ತು ಮತ್ತು ಯಂತ್ರೋಪಕರಣಗಳ ಬಾಡಿಗೆ ದರ ಹೆಚ್ಚಿರುವುದು ಚಿಂತೆಗೀಡು ಮಾಡಿದೆ.
>
> **-ಚನ್ನಪ್ಪ ಅಣ್ಣಿಗೇರಿ, ರುದ್ರಪ್ಪ ಮೆಣಸಿನಕಾಯಿ.**
> ರೈತರು.





ತಾಂತ್ರಿಕತೆಯ ▸▸3ನೇ ಪುಟಕ್ಕೆ

## ಸಮಾರೋಪ ಸಮಾರಂಭ ಇಂದು

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಆರ್ ಎನ್ ದೇಶಪಾಂಡೆ ಸರಕಾರಿ ಪ್ರಥಮದರ್ಜೆ ಕಾಲೇಜಿನ 2022-23ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ರೆಡ್ ಕ್ರಾಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ಸಮಾರೋಪ ಸಮಾರಂಭವು ಶುಕ್ರವಾರ ಮುಂಜಾನೆ 10 ಗಂಟೆಗೆ ಕಾಲೇಜು ಆವರಣದಲ್ಲಿ ಜರಗಲಿದೆ.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಅನುಪಮಾ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ನಾಗರಾಜ ದೇಶಪಾಂಡೆ, ಎಸ್ ಸಿ ಬಡ್ನಿ, ಅಶೋಕ ಸೋನಗೋಜಿ, ಉಪನ್ಯಾಸಕರಾಗಿ ಆರ್ ಆರ್ ಪಟ್ಟಣ, ಪದ್ಮಾವತಿ ವಿ, ಪ್ರಸನ್ನ ಎಸ್, ನೇತ್ರಾವತಿ ಕೆ ವಿ, ಗಿರೀಶ ಎಂ, ಗೀತಾಂಜಲಿ ಆರ್, ಜಾನಕಿ ಮರಾಠೆ, ಭಾರತಿ ಆರ್ ಎನ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

### ಕಾನೂನು ಸಾಕ್ಷರತಾ ಕಾರ್ಯಕ್ರಮದಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶ ಕೆ. ಗುರುಪ್ರಸಾದ

# ಲೈಂಗಿಕ ದೌರ್ಜನ್ಯಕ್ಕೆ ಜೀವಾವಧಿ ಶಿಕ್ಷೆ

■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರ ಅಥವಾ ಲೈಂಗಿಕ ದೌರ್ಜನ್ಯ ಎಸಗಿದರೆ ಕನಿಷ್ಠ 20 ವರ್ಷಗಳವರೆಗೆ ಶಿಕ್ಷೆ ಹಾಗೂ ಗರಿಷ್ಠ ಆಜೀವಪರ್ಯಂತ ಸೆರೆವಾಸ ಶಿಕ್ಷೆಯನ್ನು ವಿಧಿಸುವಷ್ಟು ಪೋಕ್ಸೊ ಕಾಯ್ದೆ ಗಂಭೀರವಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಹೇಳಿದರು.



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಕೀಲರ ಸಂಘ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ಆರೋಗ್ಯ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಗದಗ ತಾಲೂಕಿನ ನಾಗಾವಿ ಗ್ರಾಮದ ದಿ. ಶ್ರೀ ವಿರುಪಾಕ್ಷಪ್ಪ ಸೋಮಪ್ಪ ಚಿಂಚಲಿ ಉನ್ನತೀಕರಿಸಿದ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ 'ಪೋಕ್ಸೊ ಕಾಯ್ದೆ ಹಾಗೂ ಮಕ್ಕಳ ಕಾನೂನು'ಗಳ ಕುರಿತು ಹಮ್ಮಿಕೊಂಡಿದ್ದ ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಾಲ್ಯವಿವಾಹವೂ ಶಿಕ್ಷಾರ್ಹ ಅಪರಾಧವಾಗಿದೆ. ಪ್ರೌಢಶಾಲೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಪೋಕ್ಸೊ ಕಾಯ್ದೆಯ ಗಾಂಭೀರ್ಯವನ್ನು ಅರಿಯದೇ ಸಮಸ್ಯೆಗೀಡಾಗುವುದು ಕಂಡುಬಂದಿದ್ದರಿಂದ, ಶಾಲಾ-ಕಾಲೇಜುಗಳಲ್ಲಿ ಪೋಕ್ಸೋ ಕಾಯ್ದೆಯ ಕುರಿತು ಹಾಗೂ ಮಕ್ಕಳ ಕಾನೂನುಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ತಿಳಿಸಿದರು. ▸▸3ನೇ ಪುಟಕ್ಕೆ

> ಲೈಂಗಿಕ ಉದ್ದೇಶದಿಂದ ಮಗುವಿನ ಖಾಸಗಿ ಅಂಗಾಂಗ ಮುಟ್ಟುವುದು ಲೈಂಗಿಕ ದೌರ್ಜನ್ಯವಾಗಿದೆ. ಮುಟ್ಟದೇ ಚುಡಾಯಿಸುವುದು, ಮೊಬೈಲ್‌ನಲ್ಲಿ ಕೆಟ್ಟದಾದ ಸಂದೇಶ ಕಳಿಸುವುದು ಕೂಡ ಅಪರಾಧವಾಗಿದ್ದು, ಇದಕ್ಕೆ ಕೂಡ ಶಿಕ್ಷೆ ವಿಧಿಸಬಹುದಾಗಿದೆ. ಅಶ್ಲೀಲ ಚಿತ್ರ ಚಿತ್ರಿಸುವುದು, ಅಶ್ಲೀಲ ವಿಡಿಯೋಗಳನ್ನು ಮೊಬೈಲ್ ಹಾಗೂ ಕಂಪ್ಯೂಟರ್‌ಗಳಲ್ಲಿರಿಸಿಕೊಂಡು ನೋಡುವುದು, ಮತ್ತೊಬ್ಬರಿಗೆ ತೋರಿಸುವುದು ಅಥವಾ ವರ್ಗಾಯಿಸುವುದು ಶಿಕ್ಷಾರ್ಹವಾಗಿದೆ.
>
> **– ಕೆ. ಗುರುಪ್ರಸಾದ.**
> ಹಿರಿಯ ದಿವಾಣಿ ನ್ಯಾಯಾಧೀಶರು,
> ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ.

## ಸ್ವಾತಂತ್ರ್ಯೋತ್ಸವದಂದು ಸಾಧಕರಿಗೆ ಸನ್ಮಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವ ದಿನಾಚರಣೆ ನಿಮಿತ್ತ, ಅತ್ಯುತ್ತಮ ಸಾಧನೆ ಮಾಡಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪುರಸ್ಕಾರ ಪಡೆದ ಜಿಲ್ಲೆಯ ಸಾಧಕರನ್ನು ಗುರುತಿಸಿ ಸನ್ಮಾನಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಜಿಲ್ಲೆಯ ವಿವಿಧ ರಂಗಗಳಲ್ಲಿ ವಿಶಿಷ್ಟ ಸಾಧನೆ ಮಾಡಿ ರಾಷ್ಟ್ರ ಅಥವಾ ರಾಜ್ಯ ಮಟ್ಟದಲ್ಲಿ ಪುರಸ್ಕಾರಗಳನ್ನು ಪಡೆದ ಮಹನೀಯರನ್ನು ಗುರುತಿಸಿ ಆಗಸ್ಟ್ 15ರ ಸ್ವಾತಂತ್ರ್ಯೋತ್ಸವ ದಿನದಂದು ಸನ್ಮಾನಿಸಲಾಗುವುದು. ಈ ಬಗ್ಗೆ ಅಗತ್ಯ ದಾಖಲೆಗಳು/ಪ್ರಶಸ್ತಿ ಪ್ರಮಾಣ ಪತ್ರದೊಂದಿಗೆ ಆ.12ರೊಳಗಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗದಗ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08372-221864ಗೆ ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

### ನ್ಯಾನೋ ಡಿಎಪಿ, ಯೂರಿಯಾ ಕ್ಷೇತ್ರ ಪ್ರಾತ್ಯಕ್ಷಿಕೆಯಲ್ಲಿ ರವೀಂದ್ರಗೌಡ ಪಾಟೀಲ ಮಾಹಿತಿ

## ನ್ಯಾನೋ ಯೂರಿಯಾ ರೈತರಿಗೆ ವರದಾನ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನ್ಯಾನೋ ಯೂರಿಯಾ ಸಾರಜನಕದ ಮೂಲವಾಗಿದ್ದು, ಜೈವಿಕ ತಂತ್ರಜ್ಞಾನ ಸಂಶೋಧನಾ ಕೇಂದ್ರದಲ್ಲಿ ದೇಶೀಯ ಸ್ವತಂತ್ರ ಪೇಟೆಂಟ್ ಬಳಸಿ ಅಭಿವೃದ್ಧಿಗೊಳಿಸಲಾಗಿದೆ ಎಂದು ರೋಣ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ರವೀಂದ್ರಗೌಡ ಪಾಟೀಲ ಹೇಳಿದರು.



ಅವರು ಸಮೀಪದ ನಿಡಗುಂದಿ ಗ್ರಾಮದ ಜಮೀನೊಂದರಲ್ಲಿ ಹಮ್ಮಿಕೊಂಡಿದ್ದ ನ್ಯಾನೋ ಡಿಎಪಿ, ಯೂರಿಯಾ ಕ್ಷೇತ್ರ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗುಜರಾತಿನ ಕಲೋಲ್‌ನಲ್ಲಿರುವ ಇಫ್ಕೋ ಸಂಸ್ಥೆಯ ಈ ಗೊಬ್ಬರವು ಎಫ್‌ಸಿಒ ಅನುಮೋದಿಸಿರುವ ವಿಶ್ವದ ಮೊದಲ ನ್ಯಾನೋ ಗೊಬ್ಬರವಾಗಿದೆ. ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ ಸಾಕಷ್ಟು ಮಳೆಯಾಗಿರುವ ಕಾರಣದಿಂದ ಭೂಮಿಯಲ್ಲಿ ತೇವಾಂಶ ಹೆಚ್ಚಾಗಿದ್ದು, ಗೋವಿನಜೋಳ, ▸▸3ನೇ ಪುಟಕ್ಕೆ

### ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ವಿಜಯಕುಮಾರ ಶಿಳ್ಳಿನ

## ಎಸ್ ಎಂ ಭೂಮರಡ್ಡಿ ಶಾಲೆಯ ರಜತ ಮಹೋತ್ಸವ ನಾಳೆ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ ಎಸ್ ಎಂ ಭೂಮರಡ್ಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಗಸ್ಟ್ 12ರಂದು ಬೆಳಗ್ಗೆ 11 ಗಂಟೆಗೆ ಶಾಲೆಯ ರಜತ ಮಹೋತ್ಸವ ಕಾರ್ಯಕ್ರಮವು ಜರುಗಲಿದೆ ಎಂದು ಶಾಲಾ ಬೆಳ್ಳಿ ಮಹೋತ್ಸವ ಸಮಿತಿ ಅಧ್ಯಕ್ಷ ವಿಜಯಕುಮಾರ ಶಿಳ್ಳಿನ ಹೇಳಿದರು.



ಪಟ್ಟಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಘನ ಉಪಸ್ಥಿತಿ ವಹಿಸುವರು. ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಕೆ ಪಾಟೀಲ ಉದ್ಘಾಟಿಸುವರು. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ವಿಧಾನಪರಿಷತ್ ▸▸3ನೇ ಪುಟಕ್ಕೆ

## ಸದಾಫ ತಹಸೀಲ್ದಾರ್‌ಗೆ 'ಟಾಪ್ ಟೆನ್ ಕಲಾ ಪ್ರಶಸ್ತಿ'

■ ವಿಜಯಸಾಕ್ಷಿ ಸುದ್ದಿ, ಗದಗ



ಶ್ರೀ ದರ್ಶಿನಿ ಕಲಾಯಿ ಕೋಡಂ ಚೆನ್ನೈ, ಡಾ. ಜಯಲಲಿತಾ ಮ್ಯೂಸಿಕ್ ಆ್ಯಂಡ್ ಫೈನ್ ಆರ್ಟ್ಸ್ ಯೂನಿವರ್ಸಿಟಿ ತಮಿಳುನಾಡು ಇವರ ಸಂಯುಕ್ತ ಆಶಯದಲ್ಲಿ ಇತ್ತೀಚೆಗೆ ನ್ಯಾಷನಲ್ ಫೆಸ್ಟಿವಲ್ ನಿಮಿತ್ತ ರಾಜ್ಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಚಿತ್ರಕಲಾ ಸ್ಪರ್ಧೆ ಜರುಗಿತು.

ಇದರಲ್ಲಿ ಗದಗ ಜಿಲ್ಲೆಯ ಎಂ ಕೆ ಕೊರ್ಲಹಳ್ಳಿ ಫೌಂಡೇಶನ್ ಟ್ರಸ್ಟ್‌ನ ವಿದ್ಯಾರ್ಥಿನಿ ಸದಾಫ ಖಾ. ತಹಸೀಲ್ದಾರ್ ಪರಿಸರ ವಿಷಯ ಪೂರಕ ಚಿತ್ರ ರಚಿಸಿ, ಟಾಪ್ ಟೆನ್‌ನಲ್ಲಿ ಆಯ್ಕೆಯಾಗಿ ಕಲಾ ಪದಕ, ಪ್ರಶಸ್ತಿ ಪತ್ರವನ್ನು ಪಡೆದಿದ್ದಾಳೆ. ಸಾಧಕ ವಿದ್ಯಾರ್ಥಿನಿ ಹಾಗೂ ತರಬೇತಿ ನೀಡಿದ ಡಾ. ಜಾಕೀರಹುಸೇನ ಎಂ ಕೊರ್ಲಹಳ್ಳಿಯವರಿಗೆ ಎಂ ಕೆ ಕೊರ್ಲಹಳ್ಳಿ ಫೌಂಡೇಶನ್ ಟ್ರಸ್ಟ್‌ನ ಅಧ್ಯಕ್ಷ ಎಂ ಕೆ ಕೊರ್ಲಹಳ್ಳಿ, ಸದಸ್ಯರಾದ ವಿನಾಯಕ ಬೆಳಗಾನೂರ, ಅಂಗನವಾಡಿ ಕಾರ್ಯಕರ್ತರಾದ ಕಸ್ತೂರಿ ಆಲೂರ್, ಸಾವಿತ್ರಿ, ಸಾಹೇರಾ ಕೊರ್ಲಹಳ್ಳಿ, ಮಾಲನ ಸುಂಕದ್, ಜಿ ಆರ್ ಭಜಂತ್ರಿ ಹಾಗೂ ತೋಟದ ಚಿಲ್ಲಾಳೇಶ್ವರ ಇಂಗ್ಲಿಷ್ ಮೀಡಿಯಂ ಶಾಲೆಯ ಸಿಬ್ಬಂದಿ ವರ್ಗದವರು ಹಾರ್ದಿಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

### ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ

# ಐದು ಗ್ಯಾರಂಟಿ ಯೋಜನೆ ರೂಪಿಸಿ ನುಡಿದಂತೆ ನಡೆದ ಸರ್ಕಾರ

■ ವಿಜಯಸಾಕ್ಷಿ ಸುದ್ದಿ, ಯಾದಗಿರಿ

ರಾಜ್ಯದ ಜನತೆಗೆ ನೀಡಿದ್ದ ಭರವಸೆಯಂತೆ ಮಹತ್ವಾಕಾಂಕ್ಷಿಯ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಪರಿಣಾಮಕಾರಿ ಅನುಷ್ಠಾನ ಗೊಳಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಹೇಳಿದರು.



ನಗರದ ಹೊಸಳ್ಳಿ ರಸ್ತೆ ಪಕ್ಕದಲ್ಲಿರುವ ಕೆ.ಪಿ.ಟಿ.ಸಿ.ಎಲ್ ಸಭಾಂಗಣದಲ್ಲಿ ಗುರುವಾರ ಗೃಹಜ್ಯೋತಿ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರವು ನುಡಿದಂತೆ ನಡೆದಿದೆ.

ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವರ್ಷ 52 ಸಾವಿರ ಕೋ.ರೂಗಳ ಅನುದಾನ ವ್ಯಯವಾಗಲಿದ್ದು, ಇದಕ್ಕಾಗಿ ಐತಿಹಾಸಿಕ ಕ್ರಮ ಕೈಗೊಳ್ಳುವ ಮೂಲಕ ರಾಜ್ಯದ ಎಲ್ಲ ಜನತೆಯ ವಿಶ್ವಾಸಕ್ಕೆ ಹಾಗೂ ಸಂತಸಕ್ಕೆ ಕಾರಣವಾಗಿದೆ ಎಂದು ಅವರು ಹೇಳಿದರು.

ರಾಜ್ಯ ಸರ್ಕಾರ ಬಂದ ತಕ್ಷಣ ಕೇವಲ 2 ತಿಂಗಳಲ್ಲಿಯೇ ಶಕ್ತಿ ಯೋಜನೆ, ಗೃಹಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮೀ ಯೋಜನೆಗಳನ್ನು ಜಾರಿಗೊಳಿಸಲು ಕೈಗೊಂಡಿರುವ ಕ್ರಮ ಐತಿಹಾಸಿಕ ಹೆಜ್ಜೆಯಾಗಿದೆ. ಬೆಲೆ ಏರಿಕೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದ ನಾಡಿನ ಜನತೆಗೆ ಗ್ಯಾರಂಟಿ ಯೋಜನೆಗಳು ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುತ್ತಿದ್ದು, ಅರ್ಹ ಫಲಾನುಭವಿಗಳೂ ಕೂಡ ಇದರ ಸದುಪಯೋಗ ಪಡೆಯುವಂತೆ ಅವರು ತಿಳಿಸಿದರು.

## ಆ.13ಕ್ಕೆ ಜಕ್ಕಲಿಯಲ್ಲಿ ಬೃಹತ್ ರಕ್ತದಾನ ಶಿಬಿರ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

76ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಜಕ್ಕಲಿಯ ಶ್ರೀ ಸ್ವಾಮಿ ವಿವೇಕಾನಂದ ಯುವ ಸೇವಾ ಸಂಘ ಹಾಗೂ ಗದುಗಿನ ಬಸವೇಶ್ವರ ರಕ್ತ ಭಂಡಾರ ಇವರ ಸಹಯೋಗದಲ್ಲಿ ಸಮೀಪದ ಜಕ್ಕಲಿ ಗ್ರಾಮದ ಗ್ರಾಮ ಚಾವಡಿಯಲ್ಲಿ ಆಗಸ್ಟ್ 13ರ ಭಾನುವಾರ ಬೆಳಿಗ್ಗೆ 10ರಿಂದ ಸಾಯಂಕಾಲ 4 ಗಂಟೆಯವರೆಗೆ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಕ್ತದಾನ ಮಾಡಲು ಆಸಕ್ತಿಯುಳ್ಳ ಆರೋಗ್ಯವಂತ ಪುರುಷರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಶಿಬಿರದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಆಯೋಜಕರು ಕೋರಿದ್ದಾರೆ.

## ಸಾಕ್ಷಿ ಸುಭಾಷಿತ

**ಅವಯುವಗಳು ನೀರಿನಿಂದ, ಮನಸ್ಸು ಸತ್ಯದಿಂದ, ಜೀವನ ವಿದ್ಯೆ, ತಪಸ್ಸುಗಳಿಂದ, ಬುದ್ಧಿಯು ಜ್ಞಾನದಿಂದ ಶುದ್ಧವಾಗುತ್ತದೆ.**

**–ಸುಭಾಷಿತ**

## ಸಂಪಾದಕೀಯ

# ಪ್ರತಿಪಕ್ಷಗಳನ್ನು ಟೀಕಿಸುವ ಬದಲು ಮಣಿಪುರದ ಕಷ್ಟಕ್ಕೆ ಸ್ಪಂದಿಸಿದ್ದರೆ...

ಮಣಿಪುರದ ಬುಡಕಟ್ಟು ಮಹಿಳೆ ಮೇಲೆ ನಡೆದ ದೌರ್ಜನ್ಯದಿಂದ ಭಾರತ ಇಡೀ ಜಗತ್ತಿನ ಮುಂದೆ ತಲೆ ತಗ್ಗಿಸುವಂತಾಯಿತು. ಪ್ರತಿಪಕ್ಷ ಕಾಂಗ್ರೆಸ್ ಮಣಿಪುರದ ಘಟನೆಯನ್ನು ತೀವ್ರವಾಗಿ ಖಂಡಿಸಿತು.

ಮಣಿಪುರದ ಘಟನೆಯನ್ನು ವಿರೋಧಿಸಿ ಕಾಂಗ್ರೆಸ್ ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯಕ್ಕೆ ಮುಂದಾಯಿತು. ಸಂಖ್ಯಾಬಲ ಇಲ್ಲದಿದ್ದರೂ ಅವಿಶ್ವಾಸ ನಿರ್ಣಯಕ್ಕೆ ಮುಂದಾಯಿತು. ಸಹಜವಾಗಿ ಸೋಲು ಎದುರಾಯಿತು.

ಕಾಂಗ್ರೆಸ್ ಅವಿಶ್ವಾಸ ನಿರ್ಣಯದ ಹೆಸರಿನಲ್ಲಿ ಮಣಿಪುರದ ಘಟನೆಗೆ ಸ್ಪಂದಿಸುವ ಕೆಲಸದಲ್ಲಿ ಯಶಸ್ವಿಯಾಯಿತು. ರಾಹುಲ್ ಗಾಂಧಿ ಆದಿಯಾಗಿ ಮಾತನಾಡಿದ ಎಲ್ಲ ಕಾಂಗ್ರೆಸ್ ನಾಯಕರು ಮಣಿಪುರದ ಬುಡಕಟ್ಟು ಮಹಿಳೆಯರಿಗೆ ಧ್ವನಿಯಾದರು.

ಕಾಂಗ್ರೆಸ್ ತಂತ್ರಕ್ಕೆ ಪ್ರತಿತಂತ್ರ ರೂಪಿಸುವಲ್ಲಿ ಆಡಳಿತಾರೂಢ ಬಿಜೆಪಿ ಮಾತ್ರ ವಿಫಲವಾಯಿತು. ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ವೇಳೆ ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಮಣಿಪುರ ವಿಷಯದ ಮೇಲೆ ಚರ್ಚೆಗಿಂತ ಕಾಂಗ್ರೆಸ್ ವಿರುದ್ಧ ಟೀಕೆ ಮಾಡುವುದರಲ್ಲಿಯೇ ಹೆಚ್ಚು ಒತ್ತು ಕೊಟ್ಟಿತು. ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ವಾಕ್ಸಮರವನ್ನು ಇಡೀ ದೇಶವೇ ಗಮನಿಸಿತು. ಆದರೆ ಕಾಂಗ್ರೆಸ್ ಧ್ವನಿ ಹೆಚ್ಚು ಮೊಳಗಿತು. ಕಾಂಗ್ರೆಸ್ ಮಣಿಪುರದ ಘಟನೆ ಮುಂದಿಟ್ಟುಕೊಂಡು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿತು. ಬಿಜೆಪಿ ಸಹ ಈ ಹಿಂದಿನ ಆಡಳಿತಾವಧಿಯಲ್ಲಿನ ಲೋಪಗಳನ್ನು, ಸ್ವಾತಂತ್ರ್ಯ ಪೂರ್ವದ ಘಟನಾವಳಿಗಳನ್ನು ಮುಂದಿಟ್ಟುಕೊಂಡು ಮಾತನಾಡಿತು. ಆದರೆ ಅದರಿಂದ ಹೇಳಿಕೊಳ್ಳುವಂಥ ಪ್ರಯೋಜನ ಆಗಲಿಲ್ಲ. ಆಡಳಿತ ಪಕ್ಷ ಬಿಜೆಪಿ ಪ್ರತಿಪಕ್ಷಗಳನ್ನು ಟೀಕಿಸುವುದನ್ನು ಬಿಟ್ಟು ಮಣಿಪುರದ ಬಗ್ಗೆ ಮ ಹೆಚ್ಚು ಒತ್ತು ಕೊಟ್ಟು ಚರ್ಚೆ ಮಾಡಬೇಕಿತ್ತು. ಮಣಿಪುರದ ಹಿಂಸಾಚಾರ ನಿಯಂತ್ರಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಸದನಕ್ಕೆ ವಿವರಣೆ ನೀಡಬೇಕಿತ್ತು. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥಸಿಂಗ್ ಯಾವ ಕಾರಣಕ್ಕೆ ಮಣಿಪುರಕ್ಕೆ ಭೇಟಿ ನೀಡಲಿಲ್ಲ ಎನ್ನುವುದನ್ನು ವಿವರಿಸಬೇಕಿತ್ತು. ಇದ್ಯಾವುದನ್ನು ಮಾಡದೇ ಕಾಂಗ್ರೆಸ್ ಜನ್ಮ ಜಾಲಾಡುವ ಕೆಲಸಕ್ಕೆ ಮುಂದಾಗಿದ್ದು, ಅಷ್ಟು ಸರಿಯಲ್ಲ.

ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ವಿರುದ್ಧ ಮಾಡಿದ ಟೀಕೆಗಳ ಸತ್ಯಾಸತ್ಯತೆ ಕುರಿತು ನಾಳೆಯಿಂದ ಚರ್ಚೆಗಳು ಆರಂಭವಾಗುತ್ತವೆ. ಸದನದ ಒಳಗಿನ ಚರ್ಚೆ ಸದನದ ಹೊರಗೆ ಶುರುವಾಗುತ್ತವೆ. ಬಿಜೆಪಿ ಟೀಕೆಗಳು ಸತ್ಯವಾಗಿಯೇ ಇರಲಿ. ಆದರೆ ಬಿಜೆಪಿ ಅದನ್ನೆ ಮುಂದಿಟ್ಟುಕೊಂಡು ಮಣಿಪುರದ ಹಿಂಸಾಚಾರವನ್ನು ಜನರ ಮನಸ್ಸಿನಿಂದ ಮರೆಮಾಚಲು ಸಾಧ್ಯವಿಲ್ಲ.

ಬಿಜೆಪಿ ಇನ್ನಾದರೂ ಮಣಿಪುರದ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಅಲ್ಲಿಗೆ ಭೇಟಿ ನೀಡಿ ಹಿಂಸಾಚಾರ ನಿಯಂತ್ರಣಕ್ಕೆ ಮುಂದಾಗಬೇಕು. ಇಲ್ಲದಿದ್ದರೆ ಪ್ರತಿಪಕ್ಷಗಳ ಆರೋಪ ನಿಜ ಎನ್ನುವುದು ಸಾಬೀತಾಗುತ್ತದೆ.

## ಪುಸ್ತಕ ಪರಿಚಯ

# ಮನಸನ್ನು ವಿಕಸಿತಗೊಳಿಸುವ 'ಮುದ್ದುರಾಮ ಲಹರಿ'




ಮುದ್ದುರಾಮ ಲಹರಿ
ಲೇಖಕರು: ಹಿರೇಮಗಳೂರು ಕಣ್ಣನ್.
ಪ್ರಕಾಶಕರು: ಮುದ್ದುರಾಮ ಪ್ರತಿಷ್ಠಾನ ಮೈಸೂರು.
ಪುಟಗಳು: 124.
ಬೆಲೆ: 100ರೂ.

ಕನ್ನಡದ ಪೂಜಾರಿ ಎಂದೇ ಕರೆಯಲ್ಪಡುವ ಹಿರೇಮಗಳೂರು ಕಣ್ಣನ್ ಯಾರಿಗೆ ತಾನೆ ಗೊತ್ತಿಲ್ಲ? ಹಿರೇಮಗಳೂರಿನ ಶ್ರೀ ಕೋದಂಡರಾಮ ಸ್ವಾಮಿಗೆ ಕನ್ನಡದ ಮಂತ್ರಗಳಲ್ಲಿಯೇ ಪೂಜೆ ಮಾಡುವ ಇವರನ್ನು ಕನ್ನಡದ ಪೂಜಾರಿ ಎಂದೇ ಗುರುತಿಸಲಾಗುತ್ತಿದೆ. ಕನ್ನಡದ ಯಾವುದೇ ವಾಹಿನಿಯ ಹರಟೆಯಲ್ಲಿ ಅವರ ಉಪಸ್ಥಿತಿ ಇದ್ದೇ ಇರುತ್ತದೆ. ಅವರು ಅರಳಿಸುವ ಕನ್ನಡದ ಪದಗಳನ್ನು ಕೇಳುವುದೇ ಒಂದು ಸೊಗಸು. ಅವರ ಮಾತಿನಲ್ಲಿ ಬರುವ ಪ್ರಾಸದ ಪದಗಳನ್ನು ಯಾವುದೇ ತ್ರಾಸ ಇಲ್ಲದೆ ಅನುಭವಿಸುವುದೇ ಒಂದು ಆನಂದಾನುಭೂತಿ. ಈ ಹಿಂದೆ ಅವರು ವಾಹಿನಿಯೊಂದರಲ್ಲಿ ಭಾಷ್ಯ ನೀಡಿದ ಮುದ್ದುರಾಮನ ವಚನಗಳೆ ಅಕ್ಷರ ರೂಪ ಪಡೆದು 'ಮುದ್ದುರಾಮ ಲಹರಿ' ನಾಮದೊಂದಿಗೆ ನಮ್ಮೆದುರಿಗಿದೆ.

ಮುದ್ದುರಾಮ ಎಂಬುದು ಮೈಸೂರಿನ ಕವಿ ಕೆ ಸಿ ಶಿವಪ್ಪನವರ ಕಾವ್ಯನಾಮ. ಚೌಪದಿಗಳಲ್ಲಿ ಅವರು ಮಾಡಿಸಿರುವ ಜೀವನ ದರ್ಶನವೇ ಅವರ ವಚನಗಳ ಹೂರಣ. ಕವಿ ಡಿವಿಜಿಯವರ ಮಂಕುತಿಮ್ಮನ ಕಗ್ಗದಂತೆಯೇ ಗೋಚರಿಸುವ ಮುದ್ದುರಾಮನ ವಚನಗಳು ನಿಜಕ್ಕೂ ಅತಿ ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತೆ ರಚನೆಯಾಗಿದೆ. ಮುದ್ದುರಾಮನ ವಚನ, ಅದಕ್ಕೆ ಕನ್ನಡದ ಪೂಜಾರಪ್ಪನ ವಿವರಣೆ ಎರಡೂ ಹಾಲು-ಜೇನು ಬೆರೆತಂತಿವೆ.

ಪೂಜಾರಪ್ಪ ಕೇವಲ ತಮ್ಮ ವಿವರಣೆಯನ್ನು ನೀಡದೆ ಅದಕ್ಕೆ ಸಂದರ್ಭೋಚಿತವಾಗಿ ಹಿಂದಿನ, ಇಂದಿನ ಕವಿಗಳ, ದಾರ್ಶನಿಕರ, ವೇದ-ಮಂತ್ರಗಳ ಆಧಾರವನ್ನು ತೆಗೆದುಕೊಂಡು ವಿವರಣೆ ನೀಡಿರುವದರಿಂದ ಈ ಪುಸ್ತಕವು ಮನಸ್ಸಿಗೆ ಅತ್ಯಂತ ಆಪ್ತವಾಗುತ್ತದೆ. ಯಾರು ವಾಹಿನಿಯಲ್ಲಿ ಪೂಜಾರಪ್ಪನವರ ಮುದ್ದುರಾಮನ ವಚನಗಳ ವಿವರಣೆ ಕೇಳಲು ತಪ್ಪಿಸಿಕೊಂಡಿದ್ದಿರೋ, ಅವರೆಲ್ಲರೂ ಈ ಪುಸ್ತಕವನ್ನು ಓದಿದರೆ ಪುಸ್ತಕದ ಹೂರಣ ಖಂಡಿತ ಮಸ್ತಕಕ್ಕೆ ಇಳಿಯುತ್ತದೆ.

12ನೆ ಶತಮಾನದ ವಚನಕಾರರು, ವಿ ಸೀ, ಡಿವಿಜಿ, ಬಿಎಂಶ್ರೀ, ಕುವೆಂಪು, ಜಿ ಎಸ್ ಶಿವರುದ್ರಪ್ಪ, ಚನ್ನವೀರ ಕಣವಿ, ಕವಿ ಕೈಯಾರ, ಕಾವ್ಯಾನಂದ ಅವರನ್ನೊಳಗೊಂಡಂತೆ ಇತ್ತೀಚಿನ ಶೇ ಗೋ ಕುಲಕರ್ಣಿ, ಸಂಗಮೇಶ ಹೊಸಮನಿಯವರ ಸಾಲುಗಳನ್ನೂ ಸಹ ಬಳಸಿಕೊಂಡು ಅತ್ಯಂತ ಸುಂದರವಾದ ವಿವರಣೆಗಳನ್ನು ಪ್ರತಿ ವಚನಕ್ಕೆ ನೀಡಿರುವುದು ಕನ್ನಡದ ಪೂಜಾರಪ್ಪನ ಹೆಗ್ಗಳಿಕೆಯಾಗಿದೆ.

ನಮ್ಮೆದುರಿನಲ್ಲಿ ಚೆನ್ನಾಗಿ ಮಾತನಾಡಿ ಒಳಗೆ ನಮ್ಮ ಬಗ್ಗೆ ಹೆಗತನ ಸಾಧಿಸುವವರೆ ಇಂದಿನ ದಿನಗಳಲ್ಲಿ ಬಹಳ ಜನರಿದ್ದಾರೆ. ಅಂಥವರಿಗೆಂದೆ ಒಂದು ಸುಂದರ ವಚನ ಮುದ್ದುರಾಮನಿಂದ ನುಡಿಗಳನ್ನಾಡುವ ನೂರಾರು ವಚನಗಳು ಇದರಲ್ಲಿವೆ. ಈ ಎಲ್ಲ ವಚನಗಳಿಗೆ ಪೂಜಾರಪ್ಪ ನೀಡಿರುವ ಸೊಗಸಾದ ವಿವರಣೆಯನ್ನು ಸವಿಯಬೇಕೆಂದರೆ ಓದಲೇಬೇಕು 'ಮುದ್ದುರಾಮ ಲಹರಿ'.

ಒಂದು ಅಧ್ಯಾಯದಲ್ಲಿ ಅವರು ಜೀವನವನ್ನು ಗಣಿತಕ್ಕೆ ಹೋಲಿಸಿ ಅತ್ಯಂತ ಸೊಗಸಾಗಿ ವಿವರಿಸಿದ್ದಾರೆ. 'ಇರುವಷ್ಟು ದಿನ ಮಿತ್ರರನ್ನು ಕೂಡಬೇಕು, ಶತ್ರುಗಳನ್ನು ಕಳೆಯಬೇಕು, ಹಿತಶತ್ರುಗಳನ್ನು ಭಾಗಿಸಬೇಕು, ಬಂಧುಗಳನ್ನು ಗುಣಿಸಬೇಕು, ಉಳಿದ ಶೇಷವೇ ಭಾಗ್ಯ ವಿಶೇಷ' ಎನ್ನುವ ಮಾತು ನಿಜ ಎನಿಸುತ್ತದೆ.

ಪೂಜಾರಪ್ಪನ ಪ್ರಾಸದ ಒಂದು ಝಲಕನ್ನು ನೋಡುವುದಾದರೆ 'ಶಿವನದೆ ಈ ಜಗತ್ತಿನ ಲೀಲೆಯ ಚಾರ್ಟು, ಅವನದೇ ಇದರಲ್ಲಿ ಇರತಕ್ಕಂತಹ ಹಾರ್ಟು, ಅವನ ಕೈ ಚಳಕವೇ ಈ ಜಗತ್ತಿನ ಸೃಷ್ಟಿಯ ಲೀಲಾ ವಿನೋದದ ಒಂದು ಆರ್ಟು, ನಾವುಗಳೇನಿದ್ದರೂ ಅವನು ಹಾಕಿದಂತೆ ನಡೆದಾಡಬೇಕಾದ ಒಂದು ಪಾರ್ಟು, ಈ ಪಾರ್ಟಿನ ಈ ಬದುಕಿನ ಕೋರ್ಟಿಗೆ ನಾವು ಬಂದಿರತಕ್ಕಂತಹುದು ಅವನಿಂದ ಪಡೆದ ಸಪೋರ್ಟು.

ಅವನು ಎಲ್ಲಿಯವರೆಗೆ ಅನುಗ್ರಹಿಸುತ್ತಾನೋ ಅಲ್ಲಿಯವರೆಗಷ್ಟೆ ಇಲ್ಲಿ ನಮ್ಮ ಅಪಾರ್ಟು, ನಾವು ತೆರಳುವಾಗ ಕೊಡಬೇಕಾದುದು ಅವನ ಸಪೋರ್ಟಿನಲ್ಲಿ ಒಂದು ರೆಪೋರ್ಟು". ಈ ಪ್ರಾಸ ಯಾರಿಗೆ ತಾನೆ ಇಷ್ಟವಾಗುವುದಿಲ್ಲ ಹೇಳಿ?!

ಇಂತಹ ನೂರಾರು ಪ್ರಾಸಗಳಿಗೆ, ಭಾಷಣಕ್ಕೆ ಬೇಕಾದ ಹೂರಣಕ್ಕೆ, ನಡುನಡುವೆ ನೆಂಜಿಕೊಳ್ಳಲು ಶರಣರ ವಚನಗಳು, ಹಿರಿಯ ಕವಿಗಳ ಉಕ್ತಿಗಳು, ಅವರ ಕವನದ ಸಾಲುಸಾಲು ಸಾಲುಗಳು, ದಾರ್ಶನಿಕರ ಹೇಳಿಕೆಗಳು, ಇವೆಲ್ಲದರ ಜೊತೆಗೆ ಪ್ರಸಂಗಾವಧಾನ ಎನ್ನುವಂತೆ ಮುದ್ದುರಾಮನ ವಚನಗಳನ್ನು ನೀವೊಮ್ಮೆ ಸವಿಯಬೇಕೆಂದರೆ 'ಮುದ್ದುರಾಮ ಲಹರಿ'ಯನ್ನೊಮ್ಮೆ ಓದಿ ನಿಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಳ್ಳಿ.

–ಅರುಣ ಬಿ. ಕುಲಕರ್ಣಿ.
ನರೇಗಲ್ಲ–ಕೋಡಿಕೊಪ್ಪ.

# ಮೈಸೂರಿನಲ್ಲಿ ಮಾದಕ ದ್ರವ್ಯ ಸೇವಿಸಿ ಕೇರಳ ಯುವಕರ 'ಮೋಜು-ಮಸ್ತಿ': ವಿಡಿಯೋ, ಚಿತ್ರಗಳು ವೈರಲ್!

■ ವಿಜಯಸಾಕ್ಷಿ ಸುದ್ದಿ, ಮೈಸೂರು

ಮೈಸೂರು ಜಿಲ್ಲೆಯ ಗೋಳೂರಿನ ಕೃಷಿ ಭೂಮಿಯಲ್ಲಿ ಯುವಕ-ಯುವತಿಯರ ಗುಂಪು ಮಾದಕ ದ್ರವ್ಯ ಸೇವಿಸಿದ ಸ್ಥಿತಿಯಲ್ಲಿನ ಫೋಟೋಗಳು ಮತ್ತು ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಮೂಲಗಳ ಪ್ರಕಾರ, ಕೇರಳ ಮೂಲದ ಯುವಕರು ಗೋಳೂರು ಬಳಿ ಸ್ಥಳೀಯರಿಗೆ ಸೇರಿದ ಕೃಷಿ ಜಮೀನಿನಲ್ಲಿ ತಂಗಿದ್ದರು. ವೈರಲ್ ಆಗಿರುವ ವೀಡಿಯೊದಲ್ಲಿ, ಓರ್ವ ಯುವತಿ ನಿಯಂತ್ರಣವನ್ನು ಕಳೆದುಕೊಂಡು ನೆಲದ ಮೇಲೆ ಉರುಳುತ್ತಿರುವುದನ್ನು ಕಾಣಬಹುದು.

ಆಕೆಯ ಸ್ನೇಹಿತರು ಆಕೆ ನಿಲ್ಲಲು ಸಹಾಯ ಮಾಡಲು ಪ್ರಯತ್ನಿಸುತ್ತಿದ್ದರೂ ಸಹ ಯುವತಿಗೆ ಸಾಧ್ಯವಾಗುತ್ತಿಲ್ಲ. ಅಲ್ಲದೆ ಯುವಕರು ಹೇಗಾದರೂ ಅವಳನ್ನು ತಮ್ಮೊಂದಿಗೆ ಕರೆದೊಯ್ಯಲು ಮುಂದಾಗಿದ್ದನ್ನು ಕಾಣಬಹುದು. ಯುವಕರ ಆಕ್ಷೇಪಾರ್ಹ ಕೃತ್ಯದ ಬಗ್ಗೆ ಸ್ಥಳೀಯರು ಪ್ರಶ್ನಿಸಿದಾಗ ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಬೆಳವಣಿಗೆಯು ಕರ್ನಾಟಕ-ಕೇರಳ ಗಡಿಯಲ್ಲಿ ಗಾಂಜಾ ಸೇರಿದಂತೆ ಮಾದಕ ವಸ್ತುಗಳ ಮಾರಾಟ ಮತ್ತು ಜಾಲದ ಬಗ್ಗೆ ಪ್ರಶ್ನೆಯನ್ನು ಹುಟ್ಟುಹಾಕಿದೆ.

# ಗುಲ್ಬರ್ಗ ವಿವಿಯಲ್ಲಿ ಸಿಬ್ಬಂದಿ ಕೊರತೆ



■ ವಿಜಯಸಾಕ್ಷಿ ಸುದ್ದಿ, ಕಲಬುರಗಿ

ಸತತ ರಾಜ್ಯ ಸರ್ಕಾರಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಕಲ್ಯಾಣ ಕರ್ನಾಟಕ ಅದರಲ್ಲೂ ವಿಶೇಷವಾಗಿ ಗುಲ್ಬರ್ಗ ವಿಶ್ವವಿದ್ಯಾಲಯವು ತೀವ್ರ ನಿರ್ಲಕ್ಷಕ್ಕೆ ಒಳಗಾಗಿದ್ದು, ಒಂದು ದಶಕಕ್ಕೂ ಹೆಚ್ಚು ಕಾಲದಿಂದ ತೀವ್ರ ಸಿಬ್ಬಂದಿ ಕೊರತೆ(ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ) ಎದುರಿಸುತ್ತಿದೆ.

ಮಂಜೂರಾದ 248 ಉಪನ್ಯಾಸಕರ(ಖಾಯಂ) ಹುದ್ದೆಗಳಲ್ಲಿ 202 ಹುದ್ದೆಗಳು ಖಾಲಿ ಇವೆ. ಮಂಜೂರಾದ 36 ಪ್ರಾಧ್ಯಾಪಕರ ಹುದ್ದೆಗಳಲ್ಲಿ 34 ಹುದ್ದೆಗಳು ಖಾಲಿ ಇವೆ. ಇಬ್ಬರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಆ ಇಬ್ಬರು ನಿವೃತ್ತಿಯಾದರೆ ಮೂರು ದಶಕಗಳಷ್ಟು ಹಳೆಯದಾದ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಯಾವುದೇ ಖಾಯಂ ಪ್ರಾಧ್ಯಾಪಕರು ಇರುವುದಿಲ್ಲ.

ಇನ್ನು ಮಂಜೂರಾದ 67 ಸಹ ಪ್ರಾಧ್ಯಾಪಕ ಹುದ್ದೆಗಳಲ್ಲಿ 60 ಹುದ್ದೆಗಳು ಖಾಲಿ ಇವೆ. ಮಂಜೂರಾದ 145 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ 107 ಖಾಲಿ ಇವೆ. ಮೂಲಗಳ ಪ್ರಕಾರ, ಇತಿಹಾಸ, ಸಮಾಜಶಾಸ್ತ್ರ, ಎಂಎಸ್‌ಡಬ್ಲ್ಯೂ, ಮಹಿಳಾ ಅಧ್ಯಯನ, ಅಂಬೇಡ್ಕರ್ ಅಧ್ಯಯನ, ದೃಶ್ಯ ಕಲೆ, ಸಂಗೀತ, ಮರಾಠಿ, ಸಂಸ್ಕೃತ ಮತ್ತು ಎಂಬಿಎ ಸೇರಿದಂತೆ 38 ವಿಭಾಗಗಳಲ್ಲಿ 13 ವಿಭಾಗಗಳಲ್ಲಿ ಖಾಯಂ ಬೋಧಕ ಸಿಬ್ಬಂದಿ ಇಲ್ಲ. ಅರ್ಥಶಾಸ್ತ್ರ, ಅಪ್ಲೈಡ್ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್‌ನಂತಹ ವಿಭಾಗಗಳು ವಿಜ್ಞಾನ, ಪರಿಸರ ವಿಜ್ಞಾನ, ಪ್ರಾಣಿಶಾಸ್ತ್ರ, ಕಾನೂನು, ಕನ್ನಡ, ಶಿಕ್ಷಣ ಮತ್ತು ದೈಹಿಕ ಶಿಕ್ಷಣದಲ್ಲಿ ತಲಾ ಒಬ್ಬರು ಖಾಯಂ ಬೋಧಕ ಸಿಬ್ಬಂದಿ ಮಾತ್ರ ಇದ್ದಾರೆ.

ಗಣಿತ ಮತ್ತು ಭೌತಶಾಸ್ತ್ರ(ತಲಾ ಐದು), ಜೈವಿಕ ರಸಾಯನಶಾಸ್ತ್ರ ಮತ್ತು ವಾಣಿಜ್ಯ (ತಲಾ ನಾಲ್ಕು) ಸಿಬ್ಬಂದಿಯನ್ನು ಹೊಂದಿರುವ ವಿಭಾಗಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಅತಿಥಿ ಉಪನ್ಯಾಸಕರಿಂದ ಮಾತ್ರ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿದೆ ಎಂದು ಹಿರಿಯ ಶಿಕ್ಷಣಾಧಿಕಾರಿ ಬಸವರಾಜ ಕುಮ್ನೂರ ಅವರು ಹೇಳಿದ್ದಾರೆ.

"ನಾವು ಅತಿಥಿ ಉಪನ್ಯಾಸಕರಿಂದ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಮತ್ತು ನಾವು ಅವರಿಗೆ ಹೆಚ್ಚು ಹೊಣೆಗಾರಿಕೆ ನೀಡಲು ಸಾಧ್ಯವಿಲ್ಲ. ತೀವ್ರ ಸಿಬ್ಬಂದಿ ಕೊರತೆಯಿಂದಾಗಿ ಸಂಶೋಧನಾ ಚಟುವಟಿಕೆಗಳಿಗೂ ತೊಂದರೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

# ಲೋಕಾಯುಕ್ತ ಪ್ರಕರಣದಲ್ಲಿ ತಪ್ಪಿತಸ್ಥ ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿಗೆ ಸಚಿವ ಸಂಪುಟ ಅಸ್ತು

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಲೋಕಾಯುಕ್ತ ಪ್ರಕರಣದಲ್ಲಿ ತಪ್ಪಿತಸ್ಥರಾಗಿರುವ ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ ನೀಡಲು ರಾಜ್ಯ ಸಚಿವ ಸಂಪುಟ ಸಭೆ ಗುರುವಾರ ಅನುಮೋದನೆ ನೀಡಿದೆ.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರು, ಸಚಿವ ಸಂಪುಟ ಸಭೆಯಲ್ಲಿ ಒಟ್ಟು 16 ವಿಷಗಳ ಮೇಲೆ ಚರ್ಚೆ ನಡೆದಿದೆ ಎಂದರು.

ಲೋಕಾಯುಕ್ತ ಪ್ರಕರಣದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಡಾ.ಎಂ. ಎಚ್. ನಾಗೇಶ್ ಅವರಿಗೆ ಐದು ವರ್ಷ ಜೈಲು ಶಿಕ್ಷೆ ಆಗಿರುವ ಹಿನ್ನೆಲೆಯಲ್ಲಿ ಅವರಿಗೆ ಕಡ್ಡಾಯ ನಿವೃತ್ತಿ ನೀಡಲು ಅನುಮೋದನೆ ನೀಡಲಾಗಿದೆ ಎಂದು ಎಚ್ ಕೆ ಪಾಟೀಲ್ ಅವರು ತಿಳಿಸಿದ್ದಾರೆ.

ಇನ್ನು ಲೋಕಾಯುಕ್ತರ ಬಲೆಗೆ ಬಿದ್ದಿದ್ದ ರಾಮನಗರ ಜಿಲ್ಲಾ ಆಸ್ಪತ್ರೆ ಸ್ತ್ರೀ ರೋಗ ತಜ್ಞೆ ಡಾ.ಉಷಾ ಕದರಮಂಡಲಗಿ, ಇಂದಿರಾನಗರ ಆಸ್ಪತ್ರೆಯ ಸ್ತ್ರೀ ರೋಗ ತಜ್ಞೆ ಡಾ.ಎಸ್.ಟಿ ನಾಗಮಣಿ ಅವರಿಗೆ ಕಡ್ಡಾಯ ನಿವೃತ್ತಿ ದಂಡನೆಗೆ ಸಂಪುಟ ನಿರ್ಣಯ ಕೈಗೊಂಡಿದೆ ಎಂದು ಸಚಿವರು ಹೇಳಿದ್ದಾರೆ.

ಅಲ್ಲದೆ, ಪೋಕ್ಸೋ ಜೈಲು ಶಿಕ್ಷೆಗೆ ಗುರಿಯಾಗಿರುವ ಹೂವಿನಹಡಗಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಎನ್ ಹಳ್ಳಿಗುಡಿ ಅವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲು ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಎಸ್.ಸಿ. ಎಸ್.ಟಿ. ಮೀಸಲು ಕ್ಷೇತ್ರಗಳಲ್ಲಿ 20 ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆಗೆ 20.07 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಏರೋ ಸ್ಪೇಸ್ ಉತ್ಪಾದನೆ ಹಾಗೂ ರಕ್ಷಣಾ ಉತ್ಕೃಷ್ಟತಾ ಕೇಂದ್ರದ ಸ್ಥಾಪನೆಗೂ ಅನುಮೋದನೆ ದೊರಕಿದೆ. ಸೈಬರ್ ಅಪರಾಧ ತಡೆಗಟ್ಟುವುದು ಸೇರಿದಂತೆ ಕ್ರಮ ತೆಗೆದುಕೊಳ್ಳಲು ಕೇಂದ್ರದ ಉಪಯೋಗ ಪಡೆಯುವುದು ಹಾಗೂ ಇದರ ಪರಿಷ್ಕೃತ ವೆಚ್ಚ 391 ಕೋಟಿ ರೂಪಾಯಿ ಬಿಡುಗಡೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದರು.

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ 325 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಸಂಪುಟದಲ್ಲಿ ಚರ್ಚೆ ನಡೆದಿದ್ದು, ಆಸ್ಪತ್ರೆ ಕಟ್ಟಡದ ಪರಿಷ್ಕೃತ ವೆಚ್ಚ 187.90 ಕೋಟಿ ರೂಪಾಯಿ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

## ಕೋವಿಡ್ ನಿಯಮ ಉಲ್ಲಂಘನೆ

# ಸಿಎಂ, ಡಿಸಿಎಂ ಮೇಲಿನ ಕೇಸ್ ಹಿಂಪಡೆದ ಸರ್ಕಾರ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು



2022ರ ಕಾಂಗ್ರೆಸ್ ನ ಮೇಕೆದಾಟು ಪಾದಯಾತ್ರೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ಮತ್ತು ಕೆಲ ನಾಯಕರು ಕೋವಿಡ್ –19 ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ಕರ್ನಾಟಕ ಸಚಿವ ಸಂಪುಟ ನಿರ್ಧರಿಸಿದೆ.

ಅಂದು ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಕೋವಿಡ್ ನಿರ್ಬಂಧಗಳ ಹೊರತಾಗಿಯೂ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು ಯೋಜನೆಯನ್ನು ಅನುಷ್ಠಾನಕ್ಕೆ ಒತ್ತಾಯಿಸಿ ಪಾದಯಾತ್ರೆ ನಡೆಸಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಂಬತ್ತು ಕ್ರಿಮಿನಲ್ ಪ್ರಕರಣಗಳು ದಾಖಲಾಗಿತ್ತು. ಆ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಲು ನಿರ್ಧರಿಸಲಾಗಿದೆ.

ಇದು ಕೇವಲ ಮೇಕೆದಾಟು ಪಾದಯಾತ್ರೆ ಕೋವಿಡ್ ನಿಯಮಗಳು ಮತ್ತು ಸೆಕ್ಷನ್ 144 ಮತ್ತು ಇತರವನ್ನು ಉಲ್ಲಂಘಿಸುತ್ತದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌ಕೆ ಪಾಟೀಲ್ ಹೇಳಿದ್ದಾರೆ.

ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕರೂ ಆಗಿರುವ ಕಾಂಗ್ರೆಸ್ ಶಾಸಕ ಅಶೋಕ್ ಪಟ್ಟಣ ಅವರ ಅರ್ಜಿಯನ್ನು ಆಧರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

# ಆಗಸ್ಟ್ 25ಕ್ಕೆ ಟೋಬಿ ರಿಲೀಸ್, ಹೊಸ ಮುಖಗಳ ಪರಿಚಯದೊಂದಿಗೆ ವಿಭಿನ್ನತೆಗೆ ಪ್ರೋತ್ಸಾಹ: ರಾಜ್ ಬಿ ಶೆಟ್ಟಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು




ರಾಜ್ ಬಿ ಶೆಟ್ಟಿ ಅವರ ಚಿತ್ರಗಳಲ್ಲಿ ಹಿರಿಯ ಕಲಾವಿದರು ಹಾಗೂ ಉದಯೋನ್ಮುಖ ಪ್ರತಿಭೆಗಳ ಮಿಶ್ರಣವನ್ನು ಯಾವಾಗಲೂ ನೋಡಬಹುದು. ಈ ಸಂಪ್ರದಾಯವು ಮತ್ತೊಮ್ಮೆ ಅವರ ಮುಂಬರುವ 'ಟೋಬಿ'ಯಲ್ಲಿ ಸ್ಪಷ್ಟವಾಗಿದೆ.

ರಾಜ್ ಬಿ ಶೆಟ್ಟಿ, ಚೈತ್ರಾ ಆಚಾರ್, ಸಂಯುಕ್ತ ಹೊರನಾಡು ಮತ್ತು ಗೋಪಾಲ್ ಕೃಷ್ಣ ದೇಶಪಾಂಡೆ ಒಳಗೊಂಡಿರುವ ಈ ಚಿತ್ರದಲ್ಲಿ ಭರತ್ ಪೊಲೀಸ್ ಇನ್‌ಸ್ಪೆಕ್ಟರ್ ಪಾತ್ರದಲ್ಲಿ, ಯತೀಶ್ ಕಾನ್‌ಸ್ಟೆಬಲ್ ಆಗಿ, ಯೋಗಿ ಬಂಕೇಶ್ವರ್ ತಂದೆಯ ಪಾತ್ರದಲ್ಲಿ ಮತ್ತು ಸಂಧ್ಯಾ ಅರಿಕೆರೆ ನೆರೆಹೊರೆಯ ಮಹಿಳೆಯಾಗಿ ನಟಿಸಿದ್ದಾರೆ. ಆಗಸ್ಟ್ 25 ರಂದು ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಲಿರುವ ಚಿತ್ರದ ಟ್ರೇಲರ್‌ನೊಂದಿಗೆ ಗಮನ ಸೆಳೆದ ಕೆಲ ಹೊಸ ಮುಖಗಳಿವು.

ಹೊಸಬರನ್ನು ಪರಿಚಯಿಸುವ ಈ ವಿಧಾನ, ಕಥೆಯಲ್ಲಿ ಹೊಸತನವನ್ನು ತುಂಬುತ್ತದೆ. ಇದು ಉದ್ಯಮದ ವೈವಿಧ್ಯತೆಯ ಮೇಲೆ ಪ್ರಭಾವ ಬೀರುತ್ತದೆ ಎಂದು ರಾಜ್ ಬಿ ಶೆಟ್ಟಿ ಪ್ರತಿಪಾದಿಸುತ್ತಾರೆ. 'ಒಂದು ಮೊಟ್ಟೆಯ ಕಥೆಯಲ್ಲಿ' ನಾವು ಪರಿಚಯಿಸಿದ ಪ್ರಕಾಶ್ ತೂಮಿನಾಡ್, ಶನಿಲ್ ಗುರು ಮತ್ತು ಇತರ ಕಲಾವಿದರು ತೆರೆಯಲ್ಲಿ ವಿಶಿಷ್ಟತೆ ತಂದಿದ್ದಾರೆ. ಹೊಸ ಮುಖಗಳನ್ನು ಪಾತ್ರಗಳಾಗಿ ಪರಿವರ್ತಿಸುವುದು ತುಂಬ ಪ್ರಯೋಜನಕಾರಿ ಎನ್ನುತ್ತಾರೆ.

ಟೋಬಿಯೊಳಗೆ ಪೊಲೀಸ್ ಅಧಿಕಾರಿ ಮತ್ತು ಕಾನ್‌ಸ್ಟೆಬಲ್ ಪಾತ್ರಗಳನ್ನು ಕ್ರಮವಾಗಿ ಭರತ್ ಮತ್ತು ಯತೀಶ್ ನಿರ್ವಹಿಸಿದ್ದಾರೆ. ಅವರನ್ನು ಯಾರಾದರೂ ಪೊಲೀಸ್ ಮತ್ತು ಕಾನ್‌ಸ್ಟೆಬಲ್ ಎಂದು ನಂಬಬಹುದು ಆದರೆ, ವಿಭಿನ್ನವಾಗಿ ಕಾಣಿಸುತ್ತಾರೆ.

# ಉಡುಪಿ ಕಾಲೇಜು ಶೌಚಾಲಯ ವಿಡಿಯೋ ಪ್ರಕರಣ: ಸಿಐಡಿ ತನಿಖೆ ಚುರುಕು!

■ ವಿಜಯಸಾಕ್ಷಿ ಸುದ್ದಿ, ಮಂಗಳೂರು



ಉಡುಪಿಯ ನೇತ್ರ ಜ್ಯೋತಿ ಪ್ಯಾರಾಮೆಡಿಕಲ್ ಕಾಲೇಜಿನ ಶೌಚಾಲಯ ವಿಡಿಯೋ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ತಂಡ ಸಂತ್ರಸ್ತೆ ಹಾಗೂ ಕಾಲೇಜು ಆಡಳಿತ ಮಂಡಳಿಯ ಪ್ರತಿನಿಧಿಗಳ ಹೇಳಿಕೆ ಪಡೆದು ತನಿಖೆಯನ್ನು ತೀವ್ರಗೊಳಿಸಿದೆ. ಕಳೆದ ತಿಂಗಳು ಮೂವರು ಮುಸ್ಲಿಂ ವಿದ್ಯಾರ್ಥಿನಿಯರು ಶೌಚಾಲಯದಲ್ಲಿ ಮೊಬೈಲ್ ಕ್ಯಾಮೆರಾ ಬಳಸಿ ಹಿಂದೂ ವಿದ್ಯಾರ್ಥಿನಿಯ ಖಾಸಗಿ ದೃಶ್ಯ ಚಿತ್ರೀಕರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಹಿಂದೂ ವಿದ್ಯಾರ್ಥಿನಿ ಔಪಚಾರಿಕವಾಗಿ ದೂರು ದಾಖಲಿಸದಿದ್ದರೂ, ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ಇತ್ತೀಚೆಗೆ ಸಿಐಡಿಗೆ ಹಸ್ತಾಂತರಿಸಿದ್ದರು. ಎಸ್ಪಿ ರಾಘವೇಂದ್ರ, ಡಿವೈಎಸ್ಪಿ ಅಂಜುಮಾಲಾ ನಾಯಕ್ ನೇತೃತ್ವದಲ್ಲಿ ಸಿಐಡಿ ಅಧಿಕಾರಿಗಳು ಆರೋಪಿ ವಿದ್ಯಾರ್ಥಿಗಳ ಹೇಳಿಕೆಯನ್ನೂ ಪಡೆದುಕೊಂಡಿದ್ದಾರೆ. ಘಟನೆಯ ಸ್ಥಳದಲ್ಲಿ ದೃಶ್ಯವನ್ನು ಮರುಸೃಷ್ಟಿಸಲು ತಂಡವು ಸಜ್ಜಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯ ಕೂಡಾ ತಜ್ಞ ಸಿಬ್ಬಂದಿಯಿಂದ ಸ್ಥಳ ಪರಿಶೀಲನೆ ಮೂಲಕ ತನಿಖೆಯಲ್ಲಿ ಸೇರಿಕೊಂಡಿದೆ. ಘಟನೆ ನಡೆದ ಸ್ಥಳದಿಂದ ಬೆರಳಚ್ಚು ಸಂಗ್ರಹಿಸಲಾಗಿದೆ. ಸಿಐಡಿ ತಂಡ ಕಾಲೇಜಿನ ಸಿಬ್ಬಂದಿಯಿಂದ ಸಾಕ್ಷ್ಯಗಳನ್ನು ಸಂಗ್ರಹಿಸಿದೆ ಮತ್ತು ಈ ಹಿಂದೆ ತನಿಖೆ ನಡೆಸಿದ ಜಿಲ್ಲಾ ಪೊಲೀಸರು ಒದಗಿಸಿದ ಸುತ್ತಮುತ್ತಲಿನ ಕ್ಯಾಮೆರಾಗಳಿಂದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದೆ. ಮೂವರು ಆರೋಪಿಗಳ ಮೊಬೈಲ್ ಫೋನ್‌ಗಳನ್ನು ಹೈದರಾಬಾದ್‌ನಲ್ಲಿರುವ ಕೇಂದ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ. ಪ್ರಾಥಮಿಕ ವಿಡಿಯೋ ಸಾಕ್ಷ್ಯಾಧಾರಗಳ ಅನುಪಸ್ಥಿತಿಯು ವಿವಾದದ ಸುತ್ತಲಿನ ಸ್ಪಷ್ಟತೆಯ ಕೊರತೆಗೆ ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ.

ಇದೇ ವೇಳೆ ಸಿಐಡಿ ಎಡಿಜಿಪಿ ಮನೀಶ್ ಕರ್ಬಿಕರ್ ಉಡುಪಿಗೆ ಆಗಮಿಸಿ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಕೇ ಅಕ್ಷಯ್ ಮಚ್ಚೀಂದ್ರ ಹಾಗೂ ಸಿಐಡಿ ಎಸ್ಪಿ ರಾಘವೇಂದ್ರ ಹೆಗ್ಡೆ ಅವರೊಂದಿಗೆ ಚರ್ಚೆ ನಡೆಸಿದ್ದಾರೆ. ಸಿಐಡಿ ಡಿವೈಎಸ್ಪಿ ಅಂಜುಮಾಲಾ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಸಿಐಡಿ ಎಸ್ಪಿ ರಾಘವೇಂದ್ರ ಹೆಗಡೆ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ತನಿಖಾಧಿಕಾರಿಗೆ ಹಸ್ತಾಂತರಿಸಲಾಗುವುದು. ತನಿಖೆಯ ನಂತರ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು. ಸಿಐಡಿ ತಂಡವು ತನಿಖೆಯ ಭಾಗವಾಗಿ ಮೂರು ಮೊಬೈಲ್ ಎಫ್‌ಎಸ್‌ಎಲ್ ವರದಿಗಳನ್ನು ಸಹ ಪಡೆದುಕೊಂಡಿದೆ ಎಂದು ಅವರು ಹೇಳಿದ್ದಾರೆ.

# ನೌಕಾನೆಲೆಯ ಟಗ್ ಬೋಟ್‌ನಲ್ಲಿ ಅಗ್ನಿ ಅವಘಡ

■ ವಿಜಯಸಾಕ್ಷಿ ಸುದ್ದಿ, ಕಾರವಾರ

ಉತ್ತರ ಕನ್ನಡ ಜಿಲ್ಲೆಯ ಅರ್ಗಾದ ಕದಂಬ ನೌಕಾನೆಲೆಯ ಡಾಕ್‌ಯಾರ್ಡ್‌ನಲ್ಲಿದ್ದ ಟಗ್ ಬೋಟ್‌ನಲ್ಲಿ ಗುರುವಾರ ಅಗ್ನಿ ಅವಘಡ ಸಂಭವಿಸಿದೆ.

ಇಂದು ಮಧ್ಯಾಹ್ನ ಈ ಅವಘಡ ಸಂಭವಿಸಿದ್ದು, ದೊಡ್ಡ ಗಾತ್ರದ ದೋಣಿಗಳನ್ನು ನೌಕಾನೆಲೆಗೆ ತರಲು ಬಳಸುವ ದೋಣಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಮೂಲಗಳ ಪ್ರಕಾರ, ಟಗ್ ಬೋಟ್ ನ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅದು ಡೀಸೆಲ್ ಟ್ಯಾಂಕ್‌ಗೆ ಹರಡಿ, ದಟ್ಟವಾದ ಹೊಗೆ ಕಾಣಿಸಿಕೊಂಡಿದೆ. ತಕ್ಷಣ ನೌಕಾಪಡೆಯ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಲು ಯತ್ನಿಸಿದ್ದಾರೆ.

ಆದರೆ ಬೆಂಕಿ ಹೆಚ್ಚು ತೀವ್ರವಾಗಿ ಹರಡುತ್ತಿದ್ದರಿಂದ ಕಾರವಾರದಿಂದ ಅಗ್ನಿಶಾಮಕ ವಾಹನಗಳನ್ನು ಕರೆಯಿಸಿಕೊಂಡು ಬೆಂಕಿ ನಿಯಂತ್ರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ತಾಂತ್ರಿಕ ದೋಷದಿಂದ ಈ ಅಗ್ನಿ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದ್ದು, ಯಾವುದೇ ಜೀವ ಹಾನಿಯಾಗಿಲ್ಲ. ಆದರೆ ನೌಕಾಪಡೆಯ ಕೋಟ್ಯಂತರ ರೂಪಾಯಿ ಮೌಲ್ಯದ ವಸ್ತುಗಳಿಗೆ ಹಾನಿಯಾಗಿದೆ.

# ಮತ್ತೊಂದು ಕಲುಷಿತ ನೀರಿನ ಪ್ರಕರಣ; 80 ಮಂದಿ ಅಸ್ವಸ್ಥ



■ ವಿಜಯಸಾಕ್ಷಿ ಸುದ್ದಿ, ರಾಯಚೂರು

ಕಲ್ಯಾಣ ಕರ್ನಾಟಕದ ಜಿಲ್ಲೆಯಗಳಲ್ಲಿ ಕಲುಷಿತ ನೀರಿನ ಪ್ರಕರಣಗಳು ಒಂದಾದ ಮೇಲೊಂದರಂತೆ ನಡೆಯುತ್ತಲೇ ಇವೆ. ಅದರಲ್ಲೂ ರಾಯಚೂರು ಜಿಲ್ಲೆಯ ಕಲುಷಿತ ನೀರಿನಿಂದ ಕನಲಿ ಹೋಗಿದೆ. ಇದೀಗ, ಜಿಲ್ಲೆಯಲ್ಲಿ ಮತ್ತೊಂದು ಪ್ರಕರಣ ಸಂಭವಿಸಿದ್ದು, ಗ್ರಾಮವೊಂದರಲ್ಲಿ ಕಲುಷಿತ ನೀರು ಕುಡಿದು ಸುಮಾರು 80 ಮಂದಿ ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದಾರೆ.

ಜಿಲ್ಲೆಯ ಲಿಂಗಸುಗೂರು ತಾಲೂಕಿನ ಚಿತ್ತಾಪುರ ಗ್ರಾಮದಲ್ಲಿ ಕುಡಿಯುವ ನೀರಿಗೆ ಚರಂಡಿ ನೀರು ಮಿಶ್ರಣವಾಗಿದ್ದು, ಆ ನೀರನ್ನು ಕುಡಿದ ಗ್ರಾಮಸ್ಥರು ಅಸ್ವಸ್ಥಗೊಂಡಿದ್ದಾರೆ. ಅವರೆಲ್ಲರನ್ನೂ ನಾನಾ ಆಸ್ಪತ್ರೆಗಳಿಗೆ ದಾಖಲಿಸಾಗಿದೆ. ಗ್ರಾಮಕ್ಕೆ ನೀರು ಸರಬರಾಜು ಮಾಡುವ ಚಿತ್ತಾಪುರ ಗ್ರಾಮ ಪಂಚಾಯತಿಯ ಬೇಜವಾಬ್ದಾರಿತನದಿಂದ ದುರ್ಘಟನೆ ನಡೆಸಿದೆ ಎಂದು ಗ್ರಾಮಸ್ಥರು ಕಿಡಿಕಾರಿದ್ದಾರೆ. ಜನರು ಅಸ್ವಸ್ಥಗೊಂಡಿದ್ದರು ಪಂಚಾಯತಿ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುತ್ತಿಲ್ಲ ಎಂದು ಆರೋಪಿಸಿದ್ದು, ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

**ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.**

**ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..**

**ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.**

**E-mail: vijayasakshidaily@gmail.com**

**ಮೊ : 9019256545**

# ಕೃಷಿ ಕಾರ್ಮಿಕರು, ಬಾಡಿಗೆ ಎತ್ತುಗಳಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು!!!!

▸▸ಮೊದಲನೇ ಪುಟದಿಂದ

ಬಾಡಿಗೆ ವೆಚ್ಚ ಭರಿಸಲಾಗದ ಮತ್ತು ಸಕಾಲಕ್ಕೆ ಎತ್ತು, ಟ್ರ್ಯಾಕ್ಟರ್ ಲಭ್ಯವಾಗದ ಕಡಿಮೆ ಜಮೀನಿರುವ ರೈತರು ಕೈಕುಂಟೆ, ಸೈಕಲ್ ಕುಂಟೆಗಳ ಬಳಸಿಕೊಂಡು ಎಡೆ ಹೊಡೆಯಲು ಮುಂದಾಗುತ್ತಿದ್ದಾರೆ. ಕಳೆ ತೆಗೆಯುವುದು, ಗೊಬ್ಬರ ಹಾಕುವುದು, ಮೆಣಸಿನಗಿಡ ಹಚ್ಚಲು ಸೇರಿ ಬಿಡುವಿಲ್ಲದ ಕೆಲಸ ಸಾಗುತ್ತಿರುವುದರಿಂದ, ಕೃಷಿ ಕೂಲಿಕಾರರ ಬೇಡಿಕೆ ಮತ್ತು ಕೂಲಿ ಆಳಿನ ಪಗಾರವೂ ಹೆಚ್ಚಿದೆ. ಮುಂಗಾರು ಪೂರ್ವದಲ್ಲಿ 150ರಿಂದ 200ರೂ ರೂ ಇದ್ದ ಪಗಾರ ಇದೀಗ ಹೆಣ್ಣಾಳಿಗೆ 250 ರೂ ಮತ್ತು ಗಂಡಾಳಿಗೆ 350 ರೂ ಗೆ ಹೆಚ್ಚಳವಾಗಿದೆ. ಇತ್ತೀಚಿನ ದಿನಗಳಲ್ಲಿ ಕೃಷಿ ಕಾರ್ಮಿಕರು ಕೃಷಿಯೇತರ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ಮತ್ತು ನರೇಗಾ ಉದ್ಯೋಗ ಖಾತ್ರಿ ಯೋಜನೆ, ಗ್ಯಾರಂಟಿ ಯೋಜನೆಗಳು ಕೂಲಿಕಾರರ ಕೊರತೆಗೆ ಕಾರಣವಾಗಿದೆ ಎನ್ನುತ್ತಾರೆ ರೈತರು.

ಪ್ರಭಾವದಿಂದ ಟ್ರ್ಯಾಕ್ಟರ್ ಮೂಲಕ ಬಿತ್ತನೆಯೊಂದಿಗೆ ಎಡೆ ಹೊಡೆಯುವುದು, ಕ್ರಿಮಿನಾಶಕ ಸಿಂಪಡಣೆ ಕಾರ್ಯವೂ ಸಾಗುತ್ತಿರುವುದರಿಂದ, ಈ ಕಾರ್ಯಕ್ಕೂ ಬೇಡಿಕೆ ಮತ್ತು ಬಾಡಿಗೆ ಹೆಚ್ಚಳವಾಗಿದೆ. ಬಿತ್ತನೆ, ಎಡೆ ಹೊಡೆಯುವುದು, ಕ್ರಿಮಿನಾಶ ಸಿಂಪಡಣೆ ಸೇರಿ ಟ್ರ್ಯಾಕ್ಟರ್‌ಗಳ ಯಂತ್ರಗಳಿಗೆ ಪ್ರತಿ ಎಕರೆಗೆ 200 ರೂ ಹೆಚ್ಚಳವಾಗಿದೆ. ಇದಕ್ಕೆ ಡಿಸೆಲ್ ಬೆಲೆ ಹೆಚ್ಚಳವೂ ಕಾರಣವಾಗಿದೆ. ಬೇಡಿಕೆ ಹೆಚ್ಚಿದ್ದರಿಂದ ಎತ್ತು ಮತ್ತು ಟ್ರ್ಯಾಕ್ಟರ್‌ನವರಿಗೆ ಮುಂಗಡ ಬಾಡಿಗೆ ಕೊಟ್ಟ ನಂತರವೂ 3–4 ದಿನ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

# ನ್ಯಾನೋ ಯೂರಿಯಾ ರೈತರಿಗೆ ವರದಾನ

▸▸ಮೊದಲನೇ ಪುಟದಿಂದ

ಸೂರ್ಯಕಾಂತಿ, ತೊಗರಿ, ಶೇಂಗಾ, ಹಾಗೂ ಇತರೆ ಬೆಳೆಗಳಿಗೆ ರೈತರು ಯೂರಿಯಾ ಗೊಬ್ಬರವನ್ನು ಮೇಲು ಗೊಬ್ಬರವಾಗಿ ಬಳಸುತ್ತಿದ್ದಾರೆ. ಯೂರಿಯಾ ರಸಗೊಬ್ಬರದ ಪರ್ಯಾಯವಾಗಿ ಒಂದು ಎಕರೆ ಬೆಳೆಗೆ ಸುಮಾರು 500 ಲೀ. ನ್ಯಾನೋ ಯೂರಿಯಾ ಬಳಸಬೇಕು ಎಂದರು.

ಇಫ್ಕೋ ಕಂಪನಿಯ ಪ್ರತಿನಿಧಿ ಗಣೇಶ ಮಾತನಾಡಿ, ಬೆಳೆಗಳಿಗೆ ಹರಳು ರೂಪದ ಯೂರಿಯಾ ಬಳಸುವವರಿಂದ ಬೇಕಾದ ಪೋಷಕಾಂಶಗಳು ಕೇವಲ ಶೇ.50ರಷ್ಟು ಮಾತ್ರ ದೊರೆಯುವ ಸಾಧ್ಯತೆ ಇರುತ್ತದೆ. ನ್ಯಾನೋ ಯೂರಿಯಾ ಪ್ರಧಾನ ಪೋಷಕಾಂಶವಾದ ಸಾರಜನಕ ರೂಪದ ಗೊಬ್ಬರವಾಗಿದ್ದು, ಬೆಳೆಗಳಲ್ಲಿ ಕಳೆ ನಿರ್ವಹಣೆಯಾಗುವುದರ ಜೊತೆಗೆ ಉತ್ತಮ ಬೆಳವಣಿಗೆಗೆ ಅನುಕೂಲ ಮಾಡುತ್ತದೆ. ಬೆಳೆಗಳಿಗೆ ಬೇಕಾಗಿರುವ ಸಾರಜನಕವನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುತ್ತದೆ ಮತ್ತು ಇತರೆ ಪೋಷಕಾಂಶವನ್ನು ತೆಗೆದುಕೊಳ್ಳುವ ಸಂಯೋಜಿತ ಮಾರ್ಗವನ್ನು ಪ್ರಚೋದಿಸುತ್ತದೆ. ನ್ಯಾನೋ ಯೂರಿಯಾ ಬಳಕೆಯಿಂದ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸಿ, ವೆಚ್ಚವನ್ನು ಕಡಿಮೆ ಮಾಡುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುತ್ತದೆ ಎಂದರು.

ಈ ವೇಳೆ ಕೃಷಿ ಅಧಿಕಾರಿ ನಾಗನಗೌಡ ರೆಡ್ಡಿ, ರಾಘವೇಂದ್ರ, ರಮೇಶ ಮಾಸ್ತಿ, ರೈತರಾದ ಸುನೀಲ ಕುಂದಗೋಳ, ಸುನೀಲ ಬಸವರಡ್ಡೇರ, ಆನಂದ ಹುಯಿಲಗೋಳಮಠ, ಶರಣಪ್ಪ ಹಂಜಿ, ಶರಣಪ್ಪ ದಡ್ಡೂರ ಮುಂತಾದವರಿದ್ದರು.

# ಎಸ್ ಎಂ ಭೂಮರಡ್ಡಿ ಶಾಲೆಯ ರಜತ ಮಹೋತ್ಸವ ನಾಳೆ


▸▸ಮೊದಲನೇ ಪುಟದಿಂದ

ಸದಸ್ಯ ಸಲೀಂ ಅಹ್ಮದ್ ಮಲ್ಟಿಮೀಡಿಯಾ ತರಗತಿ ಉದ್ಘಾಟಿಸುವರು. ಶಾಸಕ ಡಾ.ಚಂದ್ರು ಲಮಾಣಿ ಅಧ್ಯಕ್ಷತೆ ವಹಿಸುವರು ಎಂದರು.

ಸಂಸದ ಶಿವಕುಮಾರ ಉದಾಸಿ, ವಿ ಪ ಸದಸ್ಯ ಎಸ್ ವಿ ಸಂಕನೂರ, ಪ್ರದೀಪ ಶೆಟ್ಟರ, ಜಿ ಎಸ್ ಪಾಟೀಲ, ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ. ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್ ಮುಖ್ಯಅತಿಥಿಗಳಾಗಿ ಆಗಮಿಸಲಿದ್ದಾರೆ. ದಾನಿಗಳಾದ ರಮೇಶಪ್ಪ ಭೂಮರಡ್ಡಿ, ಕನ್ಯಾಕುಮಾರಿ ಭೂಮರಡ್ಡಿ, ಲಿಂಗರಾಜಗೌಡ ಪಾಟೀಲ, ಮಾಜಿ ಸಚಿವ ಎಸ್ ಎಸ್ ಪಾಟೀಲ, ರಾಮಕೃಷ್ಣ ದೊಡ್ಡಮನಿ, ವಾಸಣ್ಣ ಕುರಡಗಿ, ಸುಜಾತಾ ದೊಡ್ಡಮನಿ, ಈಶ್ವರಪ್ಪ ಹಂಚಿನಾಳ, ಹೇಮಗಿರೀಶ ಹಾವಿನಾಳ, ಡಿ ಡಿ ಮೋರನಾಳ, ಹೇಮಂತಗೌಡ ಪಾಟೀಲ, ಕವಿತಾ ಉಳ್ಳಾಗಡ್ಡಿ, ರಂಜನಾ ತಳಗೇರಿ, ಬಸವಣ್ಣೆಪ್ಪ ಜಿ ಬಿ, ವಿ ಎಂ ಹಿರೇಮಠ, ನಾಗರಾಜ ಹಳ್ಳಿಕೇರಿ, ಶಿವಕುಮಾರ ಸಜ್ಜನರ ವಿಶೇಷ ಆಮಂತ್ರಿತರಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ವಿರೂಪಾಕ್ಷಪ್ಪ ಬಾರಕೇರ, ಬೆಳ್ಳಿ ಮಹೋತ್ಸವ ಸಮಿತಿ ಉಪಾಧ್ಯಕ್ಷ ವೀರಣ್ಣ ಮಡಿವಾಳರ, ಕಾರ್ಯದರ್ಶಿ ಎಂ ಪಿ ಶೀರನಹಳ್ಳಿ, ಸದಸ್ಯರಾದ ಅಶೋಕ ಹಂದ್ರಾಳ, ದುರುಗಪ್ಪ ರಾಮೇನಹಳ್ಳಿ, ಲಕ್ಷ್ಮಪ್ಪ ಮಲ್ಲಾರ್ಜಿ, ಪರುಶುರಾಮ ಡಂಬಳ, ಮುಖ್ಯ ಶಿಕ್ಷಕ ಬಿ ಕೆ ಮಾದರ, ಶಿಕ್ಷಕ ಎಸ್ ಎನ್ ಪಾಟೀಲ ಸುದ್ದಿಗೋಷ್ಠಿಯಲ್ಲಿದ್ದರು.

# ಸಿ ಎ ಪರೀಕ್ಷೆಯಲ್ಲಿ ಸಾಧನೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಬಿ ಕಾಂ 4ನೇ ಸೆಮಿಸ್ಟರ್ ವಿದ್ಯಾರ್ಥಿ ಭುವನ ಮುದಗಲ್ಲ ಸಿಎ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ, ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಈ ವಿದ್ಯಾರ್ಥಿಯನ್ನು ಸಂಸ್ಥೆಯ ಚೇರಮನ್ ಎನ್ ಎಮ್ ಕುಡತರಕರ, ಪ್ರಾಚಾರ್ಯ ಬಿ ಎಸ್ ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ನಿವೇದಿತಾ ಪೊಲೀಸ್‌ಪಾಟೀಲ, ಪ್ರೊ. ಸವಿತಾ ಪೂಜಾರ, ಸಂಸ್ಥೆಯ ಸರ್ವ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ನಿಧನ ವಾರ್ತೆ

### ವಾಯ್. ಎನ್. ಮೇರವಾಡೆ



**ಬೆಟಗೇರಿ:** ಬೆಟಗೇರಿಯ ಹೊಸ ಬನಶಂಕರಿ ಗುಡಿ ಹಿಂದುಗಡೆ ಇರುವ ಗಣ್ಯ ಜವಳಿ ಉತ್ಪಾದಕರ ಸಂಘದ ಮಾಜಿ ಅಧ್ಯಕ್ಷ, ಎಸ್‌ಎಸ್‌ಕೆ ಸಮಾಜದ ಪಂಚ ಟ್ರಸ್ಟ್ ಸಲಹಾ ಸಮಿತಿ ಸದಸ್ಯರು, ಗದಗ ಶಹರ ಬಿಜೆಪಿ ಮಾಜಿ ಅಧ್ಯಕ್ಷರಾದ ವಾಯ್ ಎನ್ ಮೇರವಾಡೆಯವರು ಗುರುವಾರ ತಮ್ಮ 81ನೇ ವಯಸ್ಸಿನಲ್ಲಿ ನಿಧನರಾದರು. ಮೃತರು ಮಕ್ಕಳು, ಸಹೋದರಿಯರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಮುಂಜಾನೆ 10.30ಕ್ಕೆ ಮೃತರ ಸ್ವಗೃಹದಿಂದ ಹೊರಡುವುದು.

---

ತಾಲೂಕಾ ಮಟ್ಟದ ಶಿಕ್ಷಕರ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಶಾಸಕ ಡಾ: ಚಂದ್ರು ಲಮಾಣಿ

# ಅಧಿಕಾರಿಗಳು ಶಿಷ್ಟಾಚಾರ ಉಲ್ಲಂಘಿಸಿದರೆ ಸಹಿಸುವುದಿಲ್ಲ



ಶಿಕ್ಷಕರ ಸಂಘಟನೆಗಳ ಪದಾಧಿಕಾರಿಗಳು ನಿರ್ಣಯಿಸಿದಂತೆ ಸೆ.5ರಂದು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ನಿಮಿತ್ತ ಶಿರಹಟ್ಟಿಯ ಜ.ಫಕೀರೇಶ್ವರ ಕಲ್ಯಾಣ ಮಂಟಪದಲ್ಲಿ ಉಭಯ ಶ್ರೀಗಳ ನೇತೃತ್ವದಲ್ಲಿ ನಡೆಸಲಾಗುವುದು. ಮುಂದಿನ ವರ್ಷ ಲಕ್ಷ್ಮೇಶ್ವರ ಪಟ್ಟಣದಲ್ಲಿ ಕಾರ್ಯಕ್ರಮ ನಡೆಸಲಾಗುವುದು. ಶಿಕ್ಷಕರ ದಿನಾಚರಣೆ ನಿಮಿತ್ತ 2 ಸಾವಿರ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮದ ಜೊತೆಗೆ ಶಿಕ್ಷಕರಿಗೆ ಗೌರವ ಕಾಣಿಕೆಯನ್ನು ಸಲ್ಲಿಸಿ, ಅವರನ್ನು ಸತ್ಕರಿಸಲಾಗುವುದು. ಎಲ್ಲ ಇಲಾಖಾ ಅಧಿಕಾರಿಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿ ಯಶಸ್ವಿಗೊಳಿಸಲಾಗುವುದು.

– ಡಾ. ಚಂದ್ರು ಲಮಾಣಿ.
ಶಾಸಕರು, ಶರಹಟ್ಟಿ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ, ಲಕ್ಷ್ಮೇಶ್ವರ, ಮುಂಡರಗಿ ತಾಲೂಕುಗಳಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಗೆ ಅಧಿಕಾರಿಗಳು ಶಿಷ್ಟಾಚಾರ ಉಲ್ಲಂಘಿಸಿದರೆ ಸಹಿಸುವುದಿಲ್ಲ.

ಸಂಬಂಧಿಸಿದ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವ ಮೂಲಕ ಅಂತಹವರಿಗೆ ತಕ್ಕ ಉತ್ತರ ನೀಡಲು ನಾನು ಸದಾ ಸಿದ್ಧನಿದ್ದೇನೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಗುರುವಾರ ಶಿರಹಟ್ಟಿಯ ಡಿ ದೇವರಾಜು ಅರಸು ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ ಶಿರಹಟ್ಟಿ–ಲಕ್ಷ್ಮೇಶ್ವರ ತಾಲೂಕಾ ವತಿಯಿಂದ ಶಿಕ್ಷಕರ ದಿನಾಚರಣೆ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಭೆಗೆ ಗೈರು ಉಳಿದಿರುವ ಕೃಷಿ, ರೇಷ್ಮೆ, ಅರಣ್ಯ, ಲೋಕೋಪಯೋಗಿ, ಪಿಆರ್‌ಇಡಿ, ಗ್ರಾಮೀಣ ಕುಡಿಯುವ ನೀರಿನ ಎಇಇ, ಹೆಸ್ಕಾಂ ಸೇರಿದಂತೆ ಗೈರು ಉಳಿದಿರುವ ಇಲಾಖಾ ಅಧಿಕಾರಿಗಳಿಗೆ ನೋಟೀಸ್ ನೀಡಿ, ಸಂಬಂಧಪಟ್ಟ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ತಾಪಂ ಇಓ ಡಾ. ಎನ್ ಎಚ್ ಓಲೇಕಾರ ಅವರಿಗೆ ಸೂಚಿಸಿದರು.

ತಹಸೀಲ್ದಾರ ಅನಿಲ ಬಡಿಗೇರ, ತಾ ಪಂ ಇಓ ಡಾ. ಎನ್ ಎಚ್ ಓಲೇಕಾರ, ಬಿಇಓ ಜಿ ಎಂ ಮುಂದಿನಮನಿ, ಎಡಿಎಚ್ ಸುರೇಶ ಕುಂಬಾರ, ಬಿಸಿಎಂನ ಎಂ ಆರ್ ಸುರಕೋಡ, ಸಿಡಿಪಿಓ ಮೃತ್ಯುಂಜಯ ಗುಡ್ಡದಾನ್ವೇರಿ, ತಾಲೂಕಾ ಸರಕಾರಿ ನೌಕರರ ಸಂಘದ ಅಧ್ಯಕ್ಷ ಶರಣಬಸವ ಪಾಟೀಲ, ಫಕ್ಕೀರೇಶ ರಟ್ಟಿಹಳ್ಳಿ, ನಾಗರಾಜ ಲಕ್ಕುಂಡಿ, ಜಾನು ಲಮಾಣಿ, ಗೂಳಪ್ಪ ಕರಿಗಾರ, ಎಸ್ ಎಫ್ ಮಠದ, ಬಿ ಎಸ್ ಹರ್ಲಾಪೂರ, ಡಿ ಎಚ್ ಪಾಟೀಲ, ಎಂ ಎಸ್ ಮೆಡ್ಲೇರಿ, ಜಿ ಡಿ ಈರಕ್ಕನವರ, ಎಲ್ ಎಸ್ ಅರಳಿಹಳ್ಳಿ, ಎಂ ಕೆ ಲಮಾಣಿ, ಎಚ್ ಎಸ್ ಹುಚ್ಚಯ್ಯನಮಠ, ಬಸವರಾಜ ಕಳಸಾಪೂರ ಮುಂತಾದವರು ಉಪಸ್ಥಿತರಿದ್ದರು.

# ಲೈಂಗಿಕ ದೌರ್ಜನ್ಯಕ್ಕೆ ಜೀವಾವಧಿ ಶಿಕ್ಷೆ

▸▸ಮೊದಲನೇ ಪುಟದಿಂದ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಅನ್ನಪೂರ್ಣ ಗಾಣಿಗೇರ ಮಾತನಾಡಿ, ಮಕ್ಕಳ ಮುಗ್ಧತೆಯನ್ನು ದುರುಪಯೋಗಪಡಿಸಿಕೊಳ್ಳುವುದು ಪೋಕ್ಸೋ ಕಾಯ್ದೆಯ ಪ್ರಕಾರ ಅಪರಾಧವಾಗುತ್ತದೆ.

ಬಾಲ್ಯವಿವಾಹ ಮಾಡಿಕೊಂಡು ಸಂಸಾರ ನಡೆಸಿದರೆ ಅದು ಕೂಡ ಅಪರಾಧವಾಗುತ್ತದೆ. ಆಸೆ–ಆಮಿಷಗಳನ್ನು ತೋರಿಸಿ ಲೈಂಗಿಕ ದೌರ್ಜನ್ಯ ಎಸಗುವ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿವೆ. ಇಂತಹ ಘಟನೆಗಳು ಕಂಡುಬಂದಲ್ಲಿ ಕೂಡಲೇ ಮಕ್ಕಳ ಸಹಾಯವಾಣಿ–1098ಗೆ ಕರೆ ಮಾಡಿ ಅಥವಾ 112ಗೆ ಕರೆ ಮಾಡಿ ವಿಷಯ ತಿಳಿಸಬೇಕು. ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುವುದು. ಮಾಹಿತಿ ತಿಳಿಸಲು ಯಾವುದೇ ಹಿಂಜರಿಕೆ ಬೇಡ ಎಂದ ಅವರು, ಶಿಕ್ಷಕರು ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಪೋಕ್ಸೊ ಕಾಯ್ದೆ ಕುರಿತು ಅರಿವು ಮೂಡಿಸಬೇಕು ಎಂದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಧಾ ಮಣ್ಣೂರ ಮಾತನಾಡಿ, ಅನಾಥ, ಓರ್ವ ಪಾಲಕರಿರುವವರು, ಆರ್ಥಿಕವಾಗಿ ಹಿಂದುಳಿದ 8, 9, 10ನೇ ತರಗತಿ ಮಕ್ಕಳ ಶಿಕ್ಷಣಕ್ಕಾಗಿ 3 ವರ್ಷಗಳ ಕಾಲ ಪ್ರತಿ ತಿಂಗಳು 4 ಸಾವಿರ ರೂ ಸಹಾಯಧನ ನೀಡಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ ಎ ರಡ್ಡೇರ ಮಾತನಾಡಿ, ಪಾಲಕರು ಮಕ್ಕಳಿಗಾಗಿ ಆಸ್ತಿ ಮಾಡದೇ, ಮಕ್ಕಳನ್ನೇ ಆಸ್ತಿ ಮಾಡಬೇಕು. ಶಿಕ್ಷಕರು ಹಾಗೂ ಗ್ರಾಮ ಪಂಚಾಯಿತಿಯವರು ಮಕ್ಕಳ ಬಗ್ಗೆ, ಅವರ ಶಿಕ್ಷಣದ ಬಗ್ಗೆ ಕಾಳಜಿ ವಹಿಸಬೇಕು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ ವಿ ನಡುವಿನಮನಿ, ಗ್ರಾ ಪಂ ಅಧ್ಯಕ್ಷ ಕುಬೇರಪ್ಪ ರಾಠೋಡ, ತಾ ಪಂ ಮಾಜಿ ಅಧ್ಯಕ್ಷ ಬಸವಣ್ಣೆಪ್ಪ ಚಿಂಚಲಿ, ತಾ ಪಂ ಮಾಜಿ ಸದಸ್ಯ ಮೈಲಾರಪ್ಪ ತಾಮ್ರಗುಂಡಿ, ಗ್ರಾ ಪಂ ಸದಸ್ಯರಾದ ಅಲ್ಲಾಸಾಬ ಪೀರಖಾನವರ, ಗವಿಯಪ್ಪ ಪೂಜಾರ, ಮುಖ್ಯೋಪಾಧ್ಯಾಯ ಜೆ ಎಂ ಮುತ್ತಿನಪೆಂಡಿಮಠ, ಸಿಆರ್‌ಪಿ ಸಿ ಬಿ ಪಾಟೀಲ ಹಾಗೂ ಗ್ರಾಮದ ಪ್ರಮುಖರು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಶಿಕ್ಷಕಿ ಎ ಎಂ ಬಾಗಲಿ ಸ್ವಾಗತಿಸಿದರು. ವಿ ಎಂ ಕ್ಯಾಡದ ನಿರೂಪಿಸಿದರು.

# ಸೇವಾ ನಿವೃತ್ತಿ ಪ್ರಯುಕ್ತ ಬೀಳ್ಕೊಡುಗೆ ಸಮಾರಂಭ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪೊಲೀಸ್ ಇಲಾಖೆಯೊಂದಿಗೆ, ಸಾರ್ವಜನಿಕರೊಂದಿಗೆ ನಿಕಟ ಸಂಪರ್ಕವನ್ನು ಇರಿಸಿಕೊಂಡು ಜನಸ್ನೇಹಿ ಠಾಣೆಯನ್ನಾಗಿಸುವಲ್ಲಿ ಮಠದ ಅವರ ಸೇವೆ ಅನನ್ಯವಾದುದು. ಸೇವೆಯಲ್ಲಿ ಕರ್ತವ್ಯ ನಿಷ್ಠೆಯೊಂದಿಗೆ ಕಾರ್ಯ ನಿರ್ವಹಿಸಿ, ಸರಳ ವ್ಯಕ್ತಿತ್ವದಲ್ಲಿ ಸಾರ್ಥಕತೆ ಕಂಡುಕೊಂಡು ನಿವೃತ್ತಿ ಹೊಂದಿರುವ ಅವರ ಸೇವೆಯನ್ನು ಇಲಾಖೆ ಹಾಗೂ ಜನರು ಮರೆಯುವುದಿಲ್ಲ. ಅವರ ನಿವೃತ್ತ ಜೀವನ ಸುಖಮಯವಾಗಿರಲಿ ಎಂದು ಠಾಣಾಧಿಕಾರಿ ಎಂ ಕೆ ನಿಖಿಲ್ ಹೇಳಿದರು

ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಸೇವೆ ಸಲ್ಲಿಸಿದ ಎಸ್ ಬಿ ಮಠದ ಸೇವಾ ನಿವೃತ್ತಿಯಾದ ಪ್ರಯುಕ್ತ, ಇತ್ತೀಚೆಗೆ ನರೇಗಲ್ಲ ಠಾಣೆಯಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಎಎಸ್‌ಐ ಎಸ್ ಎಲ್ ಹೊಸಳ್ಳಿ, ಎಚ್ ಎಂ ಕರಡಿಗುಡ್ಡ, ಕೆ ಆರ್ ಬೇಲೇರಿ, ಎನ್ ಡಿ ತಹಸೀಲ್ದಾರ್, ಕಪ್ಪತ್ತನವರ, ಮಂಜು ಭಜಂತ್ರಿ, ವಿ ಎಸ್ ಗೋದಿಗನೂರ, ಮಂಜು ಪೂಜಾರ, ರವಿ ರುದ್ರಾಕ್ಷಿ, ಎಸ್ ವಿ ನಾಳಕರ್, ವಿಜಯಲಕ್ಷ್ಮೀ, ಎಸ್ ಸಿ ಶಿವಶಿಂಪರ್, ಸಂತೋಷ್ ಗಾಟ್ಗೆ ಇದ್ದರು.

# ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆ ಅಗತ್ಯ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆಗಳು ತುಂಬಾ ಅವಶ್ಯಕವಾಗಿದೆ ಎಂದು ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ ವಿ ನಡುವಿನಮನಿ ಹೇಳಿದರು.

ಅವರು ಪಟ್ಟಣದ ಕನಕದಾಸ ಶಿಕ್ಷಣ ಸಮಿತಿಯಲ್ಲಿ ಮುಳಗುಂದ ಪ್ರೌಢಶಾಲಾ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಕ್ರೀಡಾ ಜ್ಯೋತಿ ಉದ್ಘಾಟಿಸಿ ಮಾತನಾಡಿದರು.

ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಮಕ್ಕಳು ಹೆಚ್ಚು ಹೆಚ್ಚು ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುವುದರಿಂದ ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಲು ಸಹಕಾರಿಯಾಗುತ್ತದೆ. ಇದರಿಂದ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಕನಕದಾಸ ಶಿಕ್ಷಣ ಸಮೀತಿಯ ಅಧ್ಯಕ್ಷ ರವಿ ದಂಡಿನ ಅಧ್ಯಕ್ಷತೆ ವಹಿಸಿದ್ದರು. ಪ ಪಂ ಸದಸ್ಯ ಎಸ್ ಸಿ ಬಡ್ನಿ, ಮಾಹಾದೇವಪ್ಪ ಗಡಾದ, ರವಿ ವಗ್ಗನವರ, ಶಾಲಾ ಪ್ರಧಾನ ಗುರು ಜಿ ಬಿ ಮುಳಗುಂದ ಉಪಸ್ಥಿತರಿದ್ದರು.

# ಅನಧಿಕೃತ ಶಾಲೆಗಳನ್ನು ಆ. 14ರೊಳಗಾಗಿ ಮುಚ್ಚಲು ಸೂಚನೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕರ್ನಾಟಕದಲ್ಲಿ ನೋಂದಣಿ ಆಗದೆ ಅನಧಿಕೃತವಾಗಿ ನಡೆಯುತ್ತಿರುವ ಶಾಲೆಗಳನ್ನು ಆ. 14ರೊಳಗಾಗಿ ಮುಚ್ಚಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಸೂಚನೆ ನೀಡಿದ್ದಾರೆ.

ಶಿಕ್ಷಣ ಕಾಯಿದೆ–1983 ಸೆಕ್ಷನ್–30 ಮತ್ತು 31ರಂತೆ ನೋಂದಣಿ ಅನುಮತಿಯನ್ನು ಪಡೆಯದ ಶಾಲೆಯನ್ನು ಮುಚ್ಚಿಸಲು ಆದೇಶಿಸಿದ್ದಾರೆ.

ಈ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಜಿಲ್ಲಾ ಉಪ ನಿರ್ದೇಶಕರಿಗೆ ಪತ್ರ ಬರೆದಿದ್ದು, "ರಾಜ್ಯದಲ್ಲಿನ ಕೆಲವು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಕರ್ನಾಟಕ ಶಿಕ್ಷಣ ಕಾಯಿದೆ–1983 ಸೆಕ್ಷನ್–30, 31ರ ಪ್ರಕಾರ ಇಲಾಖಾ ವತಿಯಿಂದ ಯಾವುದೇ ನೋಂದಣಿ ಪಡೆಯದೆ ಅನಧಿಕೃತವಾಗಿ ಶಾಲೆ ನಡೆಸುವುದು



ಕಾನೂನು ಬಾಹಿರವಾಗಿದೆ" ಎಂದು ಪತ್ರದಲ್ಲಿ ತಿಳಿಸಲಾಗಿದೆ.

"ನಿಮ್ಮ ಜಿಲ್ಲೆಯಲ್ಲಿ ನೋಂದಣಿ ಪಡೆಯದೆ ಅನಧಿಕೃತವಾಗಿ ಶಾಲೆ ನಡೆಸುತ್ತಿರುವುದು, ನೋಂದಣಿ ಇಲ್ಲದೆ ಉನ್ನತೀಕರಿಸಿದ ತರಗತಿ ನಡೆಸುತ್ತಿರುವುದು, ಅನಧಿಕೃತ ಪಠ್ಯಕ್ರಮ ಮತ್ತು ಅನಧಿಕೃತ ಪಠ್ಯಪುಸ್ತಕ ಬೋಧಿಸುತ್ತಿರುವುದು ಹಾಗೂ ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜಿಸಿದ ನಂತರವೂ ರಾಜ್ಯ ಪಠ್ಯಕ್ರಮದ ಶಾಲೆ ನಡೆಸುತ್ತಿರುವುದು ಅತ್ಯಂತ ಆಕ್ಷೇಪಾರ್ಹ ಮತ್ತು ನಿಯಮಬಾಹಿರವಾಗಿರುತ್ತದೆ" ಎಂದು ಹೇಳಿದ್ದಾರೆ.

"ಜಿಲ್ಲಾ ವ್ಯಾಪ್ತಿಯಲ್ಲಿ ಯಾವುದೇ ನೋಂದಣಿ ಪಡೆಯದ ನಡೆಯುತ್ತಿರುವ ಶಾಲೆಗಳು ಯಾವುದು ಇರುವುದಿಲ್ಲವೆಂದು ದೃಢೀಕರಣ ನೀಡಬೇಕು. 2023–24ನೇ ಶೈಕ್ಷಣಿಕ ಸಾಲಿನ ದಾಖಲಾತಿ ಪ್ರಾರಂಭವಾಗುವ ಮುನ್ನ ತಕ್ಷಣ ನಿಯಮಾನುಸಾರ ಕ್ರಮವಹಿಸಬೇಕು. 45 ದಿನಗಳ ಒಳಗಾಗಿ ಮಕ್ಕಳ ದಾಖಲಾತಿಗಳನ್ನು ನೀಡಬೇಕು. ಈ ಕ್ರಮ ಮುಗಿದ ನಂತರದಲ್ಲಿ ಶಾಲೆ ಮುಂದುವರೆಸಿದ್ದಲ್ಲಿ ಅಂತಹ ಶಾಲೆಗಳಿಗೆ ಪೋಷಕರು ಮಕ್ಕಳನ್ನು ದಾಖಲಿಸದಂತೆ ಸಾರ್ವಜನಿಕವಾಗಿ ಪ್ರಕಟಣೆ ಪ್ರಕಟಿಸಬೇಕು" ಎಂದು ತಿಳಿಸಿದ್ದಾರೆ.

---

ಶ್ರೀ ಬೆನಕಪ್ಪ ಶಂಕ್ರಪ್ಪ ಸಿಂಹಾಸನದ ಮಹಾವಿದ್ಯಾಲಯದಲ್ಲಿ ಉಪನ್ಯಾಸ ನೀಡಿದ ಡಾ. ನಾನು ಪಾಟೀಲ

# ಗುರಿ ಸಾಧಿಸುವ ಛಲವಿದ್ದರೆ ಯಶಸ್ಸು

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಭೂತಾಯಿಯನ್ನು ನಂಬಿ ದುಡಿಯುವ ಹಾಗೂ ಹೊಲದಲ್ಲಿ ಕೃಷಿಯಲ್ಲಿ ಸಾಧನೆ ಮಾಡುವ ಕಾಯಕವೂ ಸಹ ದೇಶ ಸೇವೆಗೆ ಸಮಾನವಾಗಿದೆ. ಹೀಗಾಗಿ, ವಿದ್ಯಾವಂತರು ಕೃಷಿಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ವಿಶ್ವ ದಾಖಲೆಯ ಅಂಧ ಸ್ಕೇಟಿಂಗ್ ಕ್ರೀಡಾಪಟು, ಅಂತಾರಾಷ್ಟ್ರೀಯ ವೇದಿಕೆಗಳ ಭಾಷಣಕಾರ ಡಾ. ನಾನು ಎಸ್ ಪಾಟೀಲ ಹೇಳಿದರು.

ಪಟ್ಟಣದ ಶ್ರೀ ಬೆನಕಪ್ಪ ಶಂಕ್ರಪ್ಪ ಸಿಂಹಾಸನದ ಸರ್ಕಾರಿ ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ ನಡೆದ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ, ಕ್ರೀಡಾ, ಯುವರೆಡ್ ಕ್ರಾಸ್, ಸ್ಕೌಟ್ ಮತ್ತು ಗೈಡ್ಸ್ ಹಾಗೂ ಎನ್‌ಎಸ್‌ಎಸ್ ಘಟಕಗಳ ವಾರ್ಷಿಕ ಸಮಾರೋಪ ಸಮಾರಂಭದಲ್ಲಿ



ಅವರು ಉಪನ್ಯಾಸ ನೀಡಿದರು.

ನಮ್ಮ ದೇಶದಲ್ಲಿ ಅಂಧರಿಗಿಂತ ಸಾಯುವವರ ಸಂಖ್ಯೆ ಜಾಸ್ತಿಯಾಗಿದೆ. ಅವರಲ್ಲಿ ಸಹಜವಾಗಿ ನಿಧನ ಹೊಂದಿದ ವ್ಯಕ್ತಿಗಳು ತಮ್ಮ ಕಣ್ಣುಗಳನ್ನು ದಾನ ಮಾಡಲು ಮುಂದಾದರೆ, ನನ್ನಂತಹ ಅಂಧ ವ್ಯಕ್ತಿ ಹುಡುಕಿದರೂ ಸಿಗುವುದಿಲ್ಲ. ಬದುಕಿದ್ದಾಗ ರಕ್ತದಾನ ಹಾಗೂ ಸತ್ತಾಗ ನೇತ್ರದಾನ ಮಾಡಲು ಪ್ರತಿಯೊಬ್ಬರು ಮುಂದಾಗಬೇಕು ಎಂದು ನೇತ್ರದಾನಕ್ಕೆ ಪ್ರೇರಣೆ ನೀಡಿದರು.

ಪ್ರಾಂಶುಪಾಲ ಮಹೇಂದ್ರ ಜಿ ಮಾತನಾಡಿ, ಅರಮನೆಯಿರಲಿ, ಗುಡಿಸಲೇ ಇರಲಿ, ಸಿರಿತನವಿರಲಿ, ಬಡತನವಿರಲಿ ಓದುವ ಹಂಬಲವಿದ್ದರೆ ಸಾಧನೆಗೆ ಯಾವುದೂ ಅಡ್ಡಿಯಾಗುವುದಿಲ್ಲ ಎನ್ನುವುದಕ್ಕೆ ಡಾ. ನಾನು ಪಾಟೀಲ ಅವರು ಜೀವಂತ ಉದಾಹರಣೆಯಾಗಿದ್ದಾರೆ. ಸೋಲು–ಗೆಲುವು ಜೀವನದ ಭಾಗಗಳು. ಸೋತಾಗ ಕುಗ್ಗುವುದು, ಗೆದ್ದಾಗ ಹಿಗ್ಗುವವರ ಕೈಯಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ.

ಹಳ್ಳಿಗಳಲ್ಲಿ ಜಮೀನು ಇರುವ ಬಹುತೇಕ ವಿದ್ಯಾವಂತ ಯುವಕರು ಕೆಲಸಕ್ಕಾಗಿ ಪಟ್ಟಣದಲ್ಲಿ ಅಲೆದು ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುವುದು ನೋಡಿದರೆ ನೋವಾಗುತ್ತದೆ. ಅದೇ ವಿದ್ಯೆಯನ್ನು ಆಧುನಿಕ ಕೃಷಿಗೆ ನೀಡಿದರೆ ರಾಜನಂತೆ ಮೆರಯಬಹುದಲ್ಲದೆ, ಸ್ಥಳೀಯವಾಗಿ ಉದ್ಯೋಗಗಳನ್ನು ಸೃಷ್ಟಿಸಬಹುದು. ಧೈರ್ಯ, ಗುರಿ ಮತ್ತು ಸಾಧಿಸುವ ಛಲ ಇದ್ದರೆ ಯಾವುದೇ ವ್ಯಕ್ತಿ ಸವಾಲು ಎದುರಿಸಿ ಸಾಧನೆಗೈಯಲು ಸಾಧ್ಯವಿದೆ. ವಿದ್ಯಾರ್ಥಿಗಳಲ್ಲಿ ಉದಾತ್ತ ಚಿಂತನೆ ಅರಳಬೇಕು. ಭವಿಷ್ಯದಲ್ಲಿ ಉನ್ನತ ಮಟ್ಟದ ಗುರಿ ತಲುಪುವ ನಂಬಿಕೆ ಇರಬೇಕು.

– ಡಾ. ನಾನು ಎಸ್ ಪಾಟೀಲ.

ಸೋಲನ್ನು ಸವಾಲಾಗಿ ಸ್ವೀಕರಿಸಿ, ಛಲದಿಂದ ಗುರಿ ಮುಟ್ಟಲು ಶ್ರಮಿಸಿದರೆ ಯಶಸ್ಸು ತಾನೇ ಹುಡುಕಿಕೊಂಡು ಬರುತ್ತದೆ. ವಿದ್ಯಾರ್ಥಿಗಳಲ್ಲಿ ಉದಾತ್ತ ಚಿಂತನೆ ಅರಳಿದಾಗ ಮಾತ್ರ ಭವಿಷ್ಯದಲ್ಲಿ ಎತ್ತರಕ್ಕೆ ಬೆಳೆಯಲು ಸಾಧ್ಯ ಎಂದರು.

ಈಚೆಗೆ ಗೌರವ ಡಾಕ್ಟರೇಟ್ ಪಡೆದ ಪ್ರಕಾಶ ಹುಲ್ಲೂರ, ಐ ಎನ್ ಹಾಳಿ ಹಾಗೂ ಉಪನ್ಯಾಸ ನೀಡಿದ ಡಾ. ನಾನು ಪಾಟೀರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಂಜುಳಾ ಈಶ್ವರಪ್ಪ ರೇವಡಿ, ಎಫ್ ಎಸ್ ಕರಿದುರಗಣ್ಣವರ, ರಾಜು ಸಾಂಗ್ಲಿಕರ, ದಾದು ಹಣಗಿ, ಶ್ರೀಧರ ಗಂಜಿಹಾಳ, ಸರಸ್ವತಿ ಕೆ, ಮಹಾಂತೇಶ ಜೀವಣ್ಣವರ, ಹಿತೇಶ ಬಿ, ಸಿದ್ಧಾರ್ಥ ಕೆ, ಜೀವಿತಾ ಎಂ ಇದ್ದರು.

ಪ್ರದರ್ಶನ ಕಲೆ, ಶಾಸ್ತ್ರೀಯ ನೃತ್ಯೋತ್ಸವ ರಾಷ್ಟ್ರೀಯ ಸಮ್ಮೇಳನದಲ್ಲಿ ಬಸವರಾಜ್ ಹೊರಟ್ಟಿ

# ಪಾರಂಪರಿಕ ಕಲೆಗಳಿಂದ ಮನುಷ್ಯನಿಗೆ ನೆಮ್ಮದಿ



■ವಿಜಯಸಾಕ್ಷಿ ಸುದ್ದಿ, ಹಂಪಿ

ಪಾರಂಪರಿಕ ಕಲೆಗಳಾದ ಸಂಗೀತ, ಸಾಹಿತ್ಯ, ಶಿಲ್ಪಕಲೆ, ಚಿತ್ರಕಲೆಗಳು ಮನುಷ್ಯನ ದೈನಂದಿನ ಬದುಕಿನಲ್ಲಿ ಶಾಂತಿ, ನೆಮ್ಮದಿಯನ್ನು ತರುತ್ತವೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಭರತ ನೃತ್ಯ ಸಂಗೀತ ಅಕಾಡೆಮಿ ಬೆಂಗಳೂರು ಇವರು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಪ್ರದರ್ಶನ ಕಲೆ ಮತ್ತು ಶಾಸ್ತ್ರೀಯ ನೃತ್ಯೋತ್ಸವ, ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಕಲೆ, ಸಂಗೀತ, ಸಾಹಿತ್ಯ ಮನುಷ್ಯನ ಒತ್ತಡವನ್ನು ದೂರ ಮಾಡಿ ನೆಮ್ಮದಿಯಿಂದ ಬಾಳುವಂತೆ ಮಾಡುವ ಶಕ್ತಿ ಹೊಂದಿವೆ. ಮನುಷ್ಯನ ದೈನಂದಿನ ಕೆಲಸ-ಕಾರ್ಯಗಳಲ್ಲಿ ಒತ್ತಡ ಇರುವುದು ಸಹಜ. ಇಂತಹ ಒತ್ತಡಗಳಿಂದ ಮುಕ್ತರಾಗಬೇಕಾದರೆ ಸಂಗೀತ ಕೇಳುವ, ಪಾರಂಪರಿಕ ಕಲೆಗಳನ್ನು ಆಸ್ವಾದಿಸುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಭಾರತೀಯ ಶಾಸ್ತ್ರೀಯ ಸಂಗೀತ, ಶಾಸ್ತ್ರೀಯ ನೃತ್ಯ ಕಲೆಗಳನ್ನು ಹೊರದೇಶದವರು ಅಳವಡಿಸಿಕೊಂಡು ನೆಮ್ಮದಿಯ ಬದುಕನ್ನು ಕಳೆಯುತ್ತಿದ್ದಾರೆ. ಇಂತಹ ಕಲೆಗಳನ್ನು ಉಳಿಸಿ-ಬೆಳೆಸಿಕೊಂಡು ಹೋಗುವ ಹೊಣೆಗಾರಿಕೆ ನಮ್ಮ ಮೇಲಿದೆ. ಇಲ್ಲಿ ಭಾಗವಹಿಸಿರುವ ಉದಯೋನ್ಮುಖ ಕಲಾವಿದರಿಗೆ ಒಳ್ಳೆಯ ಭವಿಷ್ಯ ದೊರೆಯಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ ವಿ ಪರಮ ಶಿವಮೂರ್ತಿ, ಜಿಂದಾಲ್ ಸ್ಟೀಲ್‌ನ ಉಪಾಧ್ಯಕ್ಷ ಸುನಿಲ್ ರಾಲ್ಫಾ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ನಾಗೇಶ್ ವಿ ಬೆಟ್ಟನಕೋಟೆ, ಹಂಪಿ ವಿಶ್ವವಿದ್ಯಾಲಯದ ಕುಲಸಚಿವ ಡಾ. ಸುಬ್ಬಣ್ಣ ರೈ, ಶಿಕ್ಷಣ ತಜ್ಞ ಡಾ.ಬಸವರಾಜ ಧಾರವಾಡ, ನೃತ್ಯ-ಸಂಗೀತ ಅಕಾಡೆಮಿ ಅಧ್ಯಕ್ಷೆ ಶುಭಾರಾಣಿ ಬೋಳಾರ್ ಸೇರಿದಂತೆ ವಿಶ್ವವಿದ್ಯಾಲಯದ ಸಮಸ್ತ ಆಡಳಿತ ವರ್ಗ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

ಖಾಸಗಿ ಶಿಕ್ಷಣ ಸಂಸ್ಥೆಗಳ, ನೌಕರರ ಶೈಕ್ಷಣಿಕ ವಿಚಾರ ಸಂಕಿರಣದಲ್ಲಿ ಶ್ರೀನಿಜಗುಣಪ್ರಭು ಸ್ವಾಮಿಗಳು

# ನಿಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಇಂಗ್ಲೀಷ್ ಮಾಧ್ಯಮದ ವ್ಯಾಮೋಹದಿಂದ ದಿನದಿಂದ ದಿನಕ್ಕೆ ಕನ್ನಡ ಶಾಲೆಗಳಿಗೆ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿರುವುದು ವಿಷಾದನೀಯ ಎಂದು ಶ್ರೀ ನಿಜಗುಣಪ್ರಭು ತೋಂಟದಾರ್ಯ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ರೋಟರಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲೂಕು ಘಟಕ ಮುಂಡರಗಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಸಂಘ ಮುಂಡರಗಿ ಹಾಗೂ ರೋಟರಿ ಶಿಕ್ಷಣ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಹಾಗೂ ನೌಕರರ ಶೈಕ್ಷಣಿಕ ವಿಚಾರ ಸಂಕಿರಣ, ರೋಟರಿ ಶಿಕ್ಷಣ ಸಂಸ್ಥೆಯ ಶ್ರೀ ವ್ಹಿ ಜಿ ಲಿಂಬಿಕಾಯಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ನೂತನ ಶಾಲಾ ಕೊಠಡಿಗಳ ಉದ್ಘಾಟನೆ ಹಾಗೂ ಸನ್ಮಾನ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.



> ಶತಮಾನೋತ್ಸವ ಕಂಡ ಶಾಲೆಗಳು ರಾಜ್ಯದಲ್ಲಿ ಮುಚ್ಚಿವೆ. ಇದಕ್ಕೆ ಕಾರಣ ಇಂಗ್ಲೀಷ್ ವ್ಯಾಮೋಹ. ಕನ್ನಡದ ಬಗ್ಗೆ ಮಾತನಾಡುವ, ಕನ್ನಡದ ಪರ ಹೋರಾಟ ಮಾಡುವ ನಾವು ನಮ್ಮ ಮಕ್ಕಳನ್ನೆಲ್ಲ ಇಂಗ್ಲೀಷ್ ಮಾಧ್ಯಮದ ಶಾಲೆಗೆ ಕಳುಹಿಸಿದರೆ ಕನ್ನಡ ಶಾಲೆಗಳು ಉಳಿಯುವುದಾದರೂ ಹೇಗೆ? ಮೊದಲು ನಮ್ಮ ನಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸುವ ದಿಟ್ಟ ಹೆಜ್ಜೆ ತೆಗೆದುಕೊಳ್ಳಬೇಕು. ಆಗ ಸಹಜವಾಗಿ ಕನ್ನಡ ಶಾಲೆಗಳು ಉಳಿಯುತ್ತವೆ. ಕನ್ನಡ ಭಾಷೆಗೆ ಯಾವುದೇ ಧಕ್ಕೆ ಬರದಹಾಗೆ ಕರ್ನಾಟಕದಲ್ಲಿ ಕನ್ನಡವೇ ಮೊದಲ ಆದ್ಯತೆಯಾಗಿ ಉಳಿಯುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಆತ್ಮಾವಲೋಕ ಮಾಡಿಕೊಳ್ಳುವ ಅವಶ್ಯಕತೆ ಇದೆ.
>
> - ಶ್ರೀ ನಿಜಗುಣಪ್ರಭು ತೋಂಟದಾರ್ಯ ಮಹಾಸ್ವಾಮೀಜಿ.

ಪಾಲಕರ ಮೊದಲ ಆದ್ಯತೆ ಕನ್ನಡವಾಗಿರಲಿ. ಕನ್ನಡದ ಮೇಲಿನ ಪ್ರೇಮವನ್ನು ಮಾತಿನಲ್ಲಿ, ಭಾಷಣದಲ್ಲಿ, ಹೋರಾಟದಲ್ಲಿ ತೋರಿಸಿದರೆ ಸಾಲದು. ಅದು ನಮ್ಮ ಮನೆಯಿಂದಲೇ ಆರಂಭವಾದಾಗ ಮಾತ್ರ ಕನ್ನಡ ಭಾಷೆ, ಕನ್ನಡ ಶಾಲೆಗಳು ಉಳಿಯಲು ಸಾಧ್ಯ. ನಾವೆಲ್ಲ ನೆರೆಯ ರಾಜ್ಯಗಳನ್ನು ನೋಡಿ ಕಲಿಯಬೇಕಿದೆ. ಆ ರಾಜ್ಯಗಳು ತಮ್ಮ ಮಾತೃಭಾಷೆಗೆ ಪ್ರಥಮ ಆದ್ಯತೆ ನೀಡುತ್ತವೆ.

ನಾವು ಆ ನಿಟ್ಟಿನಲ್ಲಿ ಸಾಗಿದಾಗ ಮಾತ್ರ ಕನ್ನಡವನ್ನು ಗಟ್ಟಿಯಾಗಿ ಕಟ್ಟಲು ಸಾಧ್ಯ ಎಂದು ಶ್ರೀಗಳು ಹೇಳಿದರು.

ವಿ ಪ ಸದಸ್ಯ ಎಸ್ ವ್ಹಿ ಸಂಕನೂರ ಮಾತನಾಡಿ, ಹಕ್ಕು ಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಆ ನಿಟ್ಟಿನಲ್ಲಿ ಶಿಕ್ಷಕರು ಕರ್ತವ್ಯ ಮಾಡಬೇಕೆಂದು ಹೇಳಿದರು. ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ಕನ್ನಡ ಶಾಲೆಗಳು ದುಸ್ಥಿತಿಯಲ್ಲಿದ್ದು, ಅವುಗಳನ್ನು ಸರಿಪಡಿಸಲು ಮೊದಲ ಆದ್ಯತೆಯನ್ನು ನೀಡುವುದಾಗಿ ತಿಳಿಸಿದರಲ್ಲದೆ, ಮುಂದೆ ತಾವು ಕೈಗೊಳ್ಳುವ ಅಭಿವೃದ್ಧಿಗೆ ಎಲ್ಲರ ಸಹಕಾರ ಕೋರಿದರು.

ರೋಟರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಅಕ್ಕಮಹಾದೇವಿ ಕಡ್ಡಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವ ಎಸ್ ಎಸ್ ಪಾಟೀಲ, ಡಿ ಜಿ ಪೂಜಾರ, ಹೇಮಗಿರಿ ಸ್ಥಾವಿನಾಳ, ಲಿಂಗರಾಜಗೌಡ ಪಾಟೀಲ, ಶಾಂತವ್ವ ಕರಡಿಕೊಳ್ಳ, ರಾಮಸ್ವಾಮಿ ಹೆಗ್ಗಡಾಳ, ಎಸ್ ಎಸ್ ಗಡ್ಡದ, ಎ ವಾಯ್ ನವಲಗುಂದ, ಗಂಗಾಧರ ಅಣ್ಣಿಗೇರಿ, ಜೆ ಬಿ ಬಸವಣ್ಣೆಪ್ಪ, ದೀಪಾ ಮರಡ್ಡಿ, ಹೇಮಾ ನಾಡಗೌಡ್ರ, ಎಸ್ ಎಂ ಅಗಡಿ, ಮೈಲಾರಪ್ಪ ಕಲಕೇರಿ ಉಪಸ್ಥಿತರಿದ್ದರು.

ಕೊಟ್ರೇಶ ಅಂಗಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಅನ್ನದಾನ ಮೇಟಿ ಸ್ವಾಗತಿಸಿದರು. ಎಂ ಬಿ ನಾಗರಳ್ಳಿ ನಿರೂಪಿಸಿದರು, ಎಸ್ ಬಿ ಗಿಂಡಿಮಠ ವಂದಿಸಿದರು.

ಡಾ.ಬಸವರಾಜ ಧಾರವಾಡ, ಶಿವಾನಂದ ಪಟ್ಟಣಶೆಟ್ಟಿ, ಡಾ. ಬಿ ಜಿ ಜವಳಿ, ಎಂ ಎ ರಡ್ಡೇರ್ ಮುಂತಾದವರು ಖಾಸಗಿ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ಅಲ್ಲಿರುವ ಶಿಕ್ಷಕರ ಸೇವಾ ಭದ್ರತೆ ಕುರಿತು ಸುದೀರ್ಘವಾಗಿ ಮಾತನಾಡಿ, ಪರಿಹಾರ ಕಂಡುಕೊಳ್ಳುವ ಹಾದಿಯ ಕುರಿತು ಚಿಂತನೆಗೈದರು. ಗುಣಮಟ್ಟದ ಶಿಕ್ಷಣ ನೀಡದ ಹೊರತು ಹಾಗೂ ದಶಕಗಳ ಹಿಂದಿನ ಶಿಕ್ಷಕರ ಮನಸ್ಥಿತಿಯನ್ನು ಬದಲಿಸಿಕೊಳ್ಳದೇ ಹೋದರೆ ಉತ್ಕೃಷ್ಟ ಶಿಕ್ಷಣ ನೀಡುವುದು ಅಸಾಧ್ಯ ಎಂದು ಅಭಿಪ್ರಾಯಪಟ್ಟರು.

# 'ಗೃಹ ಜ್ಯೋತಿ' ಯೋಜನೆಗೆ ಚಾಲನೆ

■ವಿಜಯಸಾಕ್ಷಿ ಸುದ್ದಿ, ಗದಗ

ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ 'ಉಚಿತ ಬೆಳಕು, ಸುಸ್ಥಿರ ಬದುಕು' ಘೋಷ ವಾಕ್ಯದೊಂದಿಗೆ ಗೃಹಬಳಕೆ ಗ್ರಾಹಕರಿಗೆ ತಿಂಗಳಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಕೆಗೆ ಇಂಧನ ಇಲಾಖೆಯಿಂದ ಆದೇಶ ಹೊರಡಿಸಿ, ಅನುಷ್ಠಾನಕ್ಕೆ ತರಲಾಗಿದೆ ಎಂದು ಕಾಂಗ್ರೆಸ್ ಮುಖಂಡ, ಕರ್ನಾಟಕ ರಾಜ್ಯ ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಹೇಳಿದರು.

ಅವರು ತಾಲ್ಲೂಕಿನ ತಿಮ್ಮಾಪೂರ ಗ್ರಾಮದಲ್ಲಿ ರಾಜ್ಯ ಸರ್ಕಾರದ 'ಗೃಹಜ್ಯೋತಿ' ಯೋಜನೆಗೆ ಚಾಲನೆ ನೀಡಿ ಮಾತನಾಡಿದರು.

ನಿಗದಿತ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಗ್ರಾಹಕರಿಗೆ ಈ ಅವಕಾಶ ಲಭ್ಯವಾಗಲಿದೆ. ಗೃಹಜ್ಯೋತಿ ಸೌಲಭ್ಯ ಸಿಗುವುದೋ, ಇಲ್ಲವೋ ಎಂದು ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿದೆ.



ಈಗಲೂ ಅರ್ಜಿ ಸಲ್ಲಿಸದೇ ಇರುವವರು ಗ್ರಾಮ ಒನ್ ನಾಗರಿಕ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಈಗ ಅರ್ಜಿ ಸಲ್ಲಿಸಿದವರಿಗೆ ಮುಂದಿನ ತಿಂಗಳಿನಿಂದ ಶೂನ್ಯ ವಿದ್ಯುತ್ ಬಿಲ್ ಬರುತ್ತದೆ. ಆದರೆ ಕಡ್ಡಾಯವಾಗಿ ಅರ್ಜಿ ಸಲ್ಲಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶೂನ್ಯ ವಿದ್ಯುತ್ ಬಿಲ್ ಪ್ರತಿಗಳನ್ನು ಗ್ರಾಹಕರಿಗೆ ಹಂಚಿಕೆ ಮಾಡಲಾಯಿತು. ರಾಮಪ್ಪ ಹಚ್ಚಪ್ಪನವರ, ಕರಿಯಪ್ಪ ಮಾಯಮ್ಮನವರ, ರಾಮಣ್ಣ ಖಂಡ್ರಿ, ಸುರೇಶ ಬಿಕನಳ್ಳಿ, ಹನುಮಪ್ಪ ಮಾಳಗೋಡರ, ಮಹೇಶ ಕಮ್ಮಾರ, ಕೆಇಬಿ ಲೈನ್‌ಮ್ಯಾನ್ ಸಂಗಯ್ಯ ಕೂಡ್ಲಿಮಠ, ಕಲ್ಲಪ್ಪ ಕುಶಿ, ಗ್ರಾಮ ಒನ್ ನಾಗರಿಕ ಸೇವಾ ಕೇಂದ್ರದ ಸಿಬ್ಬಂದಿ ಮಲ್ಲಪ್ಪ ಕೋಮಲಾಪೂರ, ಕಾಂಗ್ರೆಸ್ ಪಕ್ಷದ ಮುಖಂಡರು ಪಾಲ್ಗೊಂಡಿದ್ದರು.

# ಶೀಘ್ರದಲ್ಲೇ ಚುನಾವಣಾ ಆಯುಕ್ತರ ನೇಮಕಾತಿ ಮಸೂದೆ ಮಂಡನೆ

■ವಿಜಯಸಾಕ್ಷಿ ಸುದ್ದಿ, ನವದೆಹಲಿ

ಕೇಂದ್ರ ಕಾನೂನು ಸಚಿವಾಲಯವು , ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ ನೇಮಕಾತಿ, ಸೇವಾ ಶರತ್ತುಗಳು ಮತ್ತು ಅಧಿಕಾರದ ಅವಧಿಯನ್ನು ನಿಯಂತ್ರಿಸುವ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸುವ ಸಾಧ್ಯತೆಯಿದೆ.

ಸಚಿವಾಲಯ ಬಿಡುಗಡೆ ಮಾಡಿರುವ ಮಸೂದೆಯ ಕರಡು ಪಟ್ಟಿಯಲ್ಲಿರುವಂತೆ ಚುನಾವಣಾ ಮುಖ್ಯ ಆಯುಕ್ತರು ಹಾಗೂ ಇತರ ಆಯುಕ್ತರನ್ನು ರಾಷ್ಟ್ರಪತಿಗೆ ಶಿಫಾರಸ್ಸು ಮಾಡುವ ನೇಮಕಾತಿ ಸಮಿತಿಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ಹೊರಗಿಡಲಾಗಿದೆ.

ಹೊಸ ಮಸೂದೆಯಲ್ಲಿ ಪ್ರಧಾನಮಂತ್ರಿಯವರು ಅಧ್ಯಕ್ಷರಾಗಿರುತ್ತಾರೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಪ್ರಧಾನ ಮಂತ್ರಿಯಿಂದ ನಾಮನಿರ್ದೇಶನಗೊಂಡ ಸಂಪುಟ ಸಚಿವರ ಸಮಿತಿ ಸದಸ್ಯರಾಗಿರುತ್ತಾರೆ.




ಮಾರ್ಚ್‌ನಲ್ಲಿ ನ್ಯಾಯಮೂರ್ತಿ ಕೆ ಎಂ ಜೋಸೆಫ್ ನೇತೃತ್ವದ ಐವರು ನ್ಯಾಯಾಧೀಶರ ಸಂವಿಧಾನ ಪೀಠವು ಸರ್ವಾನುಮತದ ತೀರ್ಪಿನಲ್ಲಿ, ಕೇಂದ್ರ ಮುಖ್ಯ ಚುನಾವಣಾ ಆಯುಕ್ತರು(ಸಿಇಸಿ) ಮತ್ತು ಇತರ ಮುಖ್ಯ ಆಯುಕ್ತರ ನೇಮಕಾತಿ ಕುರಿತ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, ಪ್ರಧಾನ ಮಂತ್ರಿ, ವಿರೋಧ ಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಉನ್ನತ ಅಧಿಕಾರದ ಸಮಿತಿಯು ಸಿಇಸಿ ಅವರನ್ನು ಆಯ್ಕೆ ಮಾಡುತ್ತದೆ ಎಂದು ತೀರ್ಪು ನೀಡಿತ್ತು. ಸಿಇಸಿ ಮತ್ತು ಇಸಿಗಳ ನೇಮಕವನ್ನು ನಿಯಂತ್ರಿಸುವ ಕಾನೂನನ್ನು ಸಂಸತ್ತು ಅಂಗೀಕರಿಸುವವರೆಗೆ ಇದು ಅನ್ವಯಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಆದರೆ ಈಗ ಮಂಡಿಸಲಾಗುತ್ತಿರುವ ಮಸೂದೆಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ಕೈಬಿಡುತ್ತಿರುವುದು ವಿವಾದಕ್ಕೆ ಈಡಾಗುವ ಸಾಧ್ಯತೆಯಿದೆ.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರು (ಸೇವಾ ನೇಮಕಾತಿ ನಿಯಮಗಳು ಮತ್ತು ಅಧಿಕಾರವಧಿ ಅವಧಿ) ಮಸೂದೆ, 2023 ಅನ್ನು ರಾಜ್ಯಸಭೆಯಲ್ಲಿ ಪರಿಚಯಿಸಲು ಕರಡು ಸಿದ್ಧಪಡಿಸಲಾಗಿದೆ. ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಅಥವಾ ಇತರ ಆಯುಕ್ತರ ಹುದ್ದೆಯು ಕೇಂದ್ರ ಸರ್ಕಾರದ ಕಾರ್ಯದರ್ಶಿಗೆ ಸಮನಾದ ಅಧಿಕಾರ ಹೊಂದಿರುತ್ತದೆ ಎಂದು ಮಸೂದೆ ಹೇಳುತ್ತದೆ. ಇವರು 'ಚುನಾವಣೆಗಳ ನಿರ್ವಹಣೆ ಮತ್ತು ನಡವಳಿಕೆಯ ಬಗ್ಗೆ ಜ್ಞಾನ ಮತ್ತು ಅನುಭವ ಹೊಂದಿರುವ ಸಮಗ್ರತೆಯ ವ್ಯಕ್ತಿಗಳಾಗಿರಬೇಕು' ಎಂದು ಹೇಳುತ್ತದೆ.

ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು

# ಬಿಲ್ ಬಾಕಿ ಬಿಜೆಪಿ ನಾಯಕರ ಹತಾಶೆಯ ಆರೋಪ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

'ಬಾಕಿ ಬಿಲ್ ಪಾವತಿ ವಿಳಂಬ ಆಗುತ್ತಿದೆ ಎಂದು ಗುತ್ತಿಗೆದಾರರು ಹೇಳಿದ್ದಾರೆ'

'ಪರಿಶೀಲಿಸಿ ಹಣ ಬಿಡುಗಡೆ ಮಾಡುವುದಾಗಿ ಡಿಸಿಎಂ ಡಿಕೆಶಿ ಹೇಳಿದ್ದಾರೆ'



ಬಿಜೆಪಿ ನಾಯಕರು ಹತಾಶೆಯಿಂದ ಆರೋಪ ಮಾಡುತ್ತಿದ್ದಾರೆ. ಎಲ್ಲಿ ಹೋಗಿ ಧ್ವನಿ ಎತ್ತಬೇಕೋ ಅಲ್ಲಿ ಇವರು ಮಾತಾಡುತ್ತಿಲ್ಲ. ಮೊದಲು ಬಿಜೆಪಿಯವರು ವಿಪಕ್ಷ ನಾಯಕರನ್ನು ಆಯ್ಕೆ ಮಾಡಲಿ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

ಸಿಸಿಎಂ ಡಿಕೆ ಶಿವಕುಮಾರ್ ವಿರುದ್ಧ 15% ಕಮಿಷನ್ ಆರೋಪ ವಿಚಾರಕ್ಕೆ ಸಂಬಂಧಿಸಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, "ಗುತ್ತಿಗೆದಾರರು ಕಮಿಷನ್ ಕೇಳಿದ್ದಾರೆ ಅಂತ ಹೇಳಿಲ್ಲ. ಬಾಕಿ ಬಿಲ್ ಪಾವತಿ ವಿಳಂಬ ಆಗುತ್ತಿದೆ ಎಂದು ಹೇಳಿದ್ದಾರೆ" ಎಂದು ಸಮರ್ಥಿಸಿಕೊಂಡರು.

"ಕೆಲಸ ಆಗಿದ್ದರೆ ಹಣ ಬಿಡುಗಡೆ ಮಾಡೋದಾಗಿ ಸಿಎಂ ಹೇಳಿದ್ದಾರೆ. ಪರಿಶೀಲಿಸಿ ಹಣ ಬಿಡುಗಡೆ ಮಾಡುವುದಾಗಿ ಡಿಸಿಎಂ ಹೇಳಿದ್ದಾರೆ. ಆದರೆ, ಈ ಬಿಜೆಪಿ ನಾಯಕರು ಹತಾಶೆಯಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ" ಎಂದು ಹರಿಹಾಯ್ದರು.

# ರೈತರಿಗೆ ನ್ಯಾಯ ದೊರಕಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಹೊಂಬಳ ಗ್ರಾಮದ ರೈತರ ಫಲವತ್ತಾದ ಭೂಮಿಯಲ್ಲಿ ವಿದ್ಯುತ್ ಸಂಪರ್ಕ ನಿರ್ಮಾಣಕ್ಕಾಗಿ ವಿದ್ಯುತ್ ಕಂಬಗಳನ್ನು ಅಳವಡಿಸುವ ನೆಪದಲ್ಲಿ ಅನಿಗದಿತ ದರದಲ್ಲಿ ರೈತರಿಗೆ ಹಣ ನೀಡಿ, ವ್ಯವಹಾರದಲ್ಲಿ ಅನ್ಯಾಯ ಮಾಡಿರುವ ರಿನ್ಯೂವ್ ವಿಂಡ್ ಪವರ್ ಕಂಪನಿಯಿಂದ ರೈತರಿಗೆ ನ್ಯಾಯ ದೊರಕಿಸುವಂತೆ ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ಹೊಂಬಳ ಗ್ರಾಮ ಘಟಕದ ಹನೀಫಸಾಬ ಬಾ. ಹಾದಿಮನಿ ನೇತೃತ್ವದಲ್ಲಿ ಗದಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿ ಮಾತನಾಡಿದ ಹನೀಫಸಾಬ ಬಾ. ಹಾದಿಮನಿ, ಅನಿಗದಿತವಾದ ದರದಲ್ಲಿ ತಮ್ಮ ಇಚ್ಛೆಯ ಪ್ರಕಾರ ಹಣ ನೀಡಿ ತಾರತಮ್ಯವೆಸಗಿದ್ದಾರೆ. ಈ ಕಂಪನಿಯ ಜವಾನರಿಂದ ಹಿಡಿದು ಆಡಳಿತ ಪ್ರಭಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲು ಸಂಬಂಧಪಟ್ಟ ದಾಖಲೆಗಳನ್ನು ಪೂರೈಸಬೇಕು. ಒಂದು ವೇಳೆ ಈ ಕಂಪನಿಯವರು ನಮ್ಮ ಮನವಿಗೆ ಸ್ಪಂದಿಸದಿದ್ದರೆ ವೇದಿಕೆಯ ವತಿಯಿಂದ ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದರು.




ಈ ಸಂದರ್ಭದಲ್ಲಿ ವೇದಿಕೆಯ ಕಾರ್ಯಕರ್ತರಾದ ಮಾಬುಸಾಬ ಫ ಗುದಗನೂರ, ಮಹ್ಮದಸಾಬ ಫ ಹಾದಿಮನಿ, ಅಲಿಅಕ್ಬರ ನ ಸಂದಿಮನಿ, ಮುನಾಫ ಬಾ ಬಾಪೂನವರ, ಎಮ್ ಎ ಕುರ್ತಕೋಟಿ, ಸಂಜಯ ತೆ- ಊಟದ, ರಾಜು ಸಾ ಅರಹುಣಸಿ, ಖಾದರಸಾಬ ರಾ ವಡ್ಡಟ್ಟಿ, ರಮೇಶ ಕರಿಗಾರ, ಮುತ್ತು ಮಾಗಳದ, ಮಹಮ್ಮದರಫೀಕ ಕದಡಿ ಹಾಗೂ ತಾಲೂಕಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಭಕ್ತಿ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ಆ.13ಕ್ಕೆ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ಗದುಗಿನ ಡಾ. ಪಂ ಪುಟ್ಟರಾಜ ಸೇವಾ ಸಮಿತಿಯು, ಡಾ. ಪಂ. ಪುಟ್ಟರಾಜರ ಕವಿ ಗವಾಯಿಗಳವರ ಸಾಹಿತ್ಯ ಸೇವೆಯನ್ನು ಸ್ಮರಿಸಿಕೊಳ್ಳುವ ಮತ್ತು ಕನ್ನಡ ನಾಡಿನ ಭಕ್ತಿ ಸಾಹಿತ್ಯ ಪರಂಪರೆ, ಭಕ್ತಿ ಪಂಥದ ದಾರ್ಶನಿಕರನ್ನು ಸ್ಮರಿಸಿಕೊಳ್ಳುವ ಉದ್ದೇಶದಿಂದ, ರಾಜ್ಯಮಟ್ಟದ ಭಕ್ತಿ ಸಾಹಿತ್ಯ ಸಮ್ಮೇಳನವನ್ನು ಅಕ್ಟೋಬರ್ 1ರಂದು ಬೆಳಗಾವಿ ನಗರದಲ್ಲಿ ಹಮ್ಮಿಕೊಂಡಿದೆ.

ಈ ಭಕ್ತಿ ಸಮ್ಮೇಳನದ ಯಶಸ್ಸಿಗಾಗಿ ಸಮ್ಮೇಳನದ ಸಂಘಟನಾ ಸಮಿತಿಯ ಸದಸ್ಯರನ್ನು ಗುರುತಿಸುವ, ಸಮ್ಮೇಳನದ ಸ್ವರೂಪ ಕುರಿತು ಪೂಜ್ಯರ ಅಭಿಮಾನಿ ಭಕ್ತರೊಂದಿಗೆ ಚರ್ಚಿಸಲು, ಆ.13ರಂದು ಬೆಳಿಗ್ಗೆ 10.30ಕ್ಕೆ ಬೆಳಗಾವಿಯ ಅಖಿಲ ಭಾರತ ವೀರಶೈವ ಮಹಾಸಭೆಯ, ವೀರಶೈವ ಲಿಂಗಾಯತ ಭವನದಲ್ಲಿ ಸಮಾನ ಮನಸ್ಕರ ಸಭೆ ಕರೆಯಲಾಗಿದೆ.



ಸಭೆಯ ಅಧ್ಯಕ್ಷತೆಯನ್ನು ವೀರಶೈವ ಮಹಾಸಭೆ ಬೆಳಗಾವಿಯ ಜಿಲ್ಲಾಧ್ಯಕ್ಷೆ ರತ್ನಪ್ರಭಾ ಬೆಲ್ಲದ ವಹಿಸಿಕೊಳ್ಳುವರು. ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಸಂಸ್ಥಾಪಕ ರಾಜ್ಯಾಧ್ಯಕ್ಷ ವೇ. ಚನ್ನವೀರಸ್ವಾಮಿಗಳು ಹಿರೇಮಠ (ಕಡಣಿ) ಗದಗ ಇವರು ಸಮ್ಮೇಳನ ಸ್ವರೂಪದ ಕುರಿತು ವಿವರಿಸಲಿದ್ದಾರೆ. ಸಭೆಯಲ್ಲಿ ಸಮಿತಿಯ ರಾಜ್ಯ ಕಾರ್ಯದರ್ಶಿ ಪ್ರೊ. ಮಂಜುಶ್ರೀ ಹಾವಣ್ಣವರ ಬೆಳಗಾವಿ, ಸೇವಾ ಸಮಿತಿಯ ಬೆಳಗಾವಿ ಮಹಾನಗರ ಸಂಚಾಲಕಿ ಗಿರಿಜಾ ಮುಳಗುಂದ ಉಪಸ್ಥಿತರಿರುವರು.

ನಗರದ ಸಾಹಿತಿಗಳು, ಸಂಘಟಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಲಹೆ-ಸೂಚನೆಗಳನ್ನು ನೀಡಬೇಕೆಂದು ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಬೆಳಗಾವಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಿದ್ಯಾ ಮಗದುಮ್ ಗೋಕಾಕ್ ಪತ್ರಿಕಾ ಪ್ರಕಟಣೆ ಮೂಲಕ ವಿನಂತಿಸಿಕೊಂಡಿದ್ದು, ಸಭೆಯ ಕುರಿತು ಮಾಹಿತಿಗಾಗಿ-94802 26733 ಸಂಪರ್ಕಿಸಲು ಕೋರಿದ್ದಾರೆ.



ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆ ಲಕ್ಷ್ಮೇಶ್ವರದಲ್ಲಿ ಇಲಾಖೆಯಿಂದ ಕೊಡಮಾಡಿದ ಸಮವಸ್ತ್ರಗಳನ್ನು ಮಕ್ಕಳಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಪ್ರಧಾನ ಗುರುಗಳಾದ ಬಿ ಎಂ ಕುಂಬಾರ, ಶಿಕ್ಷಕರಾದ ಆರ್ ಎಂ ಶಿರಹಟ್ಟಿ, ಶ್ರೀಮತಿ ಎಚ್ ಡಿ ನಿಂಗರೆಡ್ಡಿ, ಶ್ರೀಮತಿ ಸ್ವಪ್ನ ಕಾಳೆ, ಅತಿಥಿ ಶಿಕ್ಷಕರಾದ ಕುಮಾರಿ ಪೂರ್ವಿ ಮುದಕಣ್ಣನವರ ಹಾಗೂ ಆರ್ ಕೆ ಉಪನಾಳ ಉಪಸ್ಥಿತರಿದ್ದರು.

# ನೇರಳೆ ಮೆಟ್ರೊ ಮಾರ್ಗದಲ್ಲಿ ಮೂರು ದಿನ ವ್ಯತ್ಯಯ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಹಸಿರು ಮಾರ್ಗದ ರೈಲು ಸೇವೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಬೆಳಗ್ಗೆ 5 ಗಂಟೆಯಿಂದ 7 ಗಂಟೆಯವರೆಗೆ ಮೆಟ್ರೋ ರೈಲು ಸೇವೆಯಲ್ಲಿ ವ್ಯತ್ಯಯ ರಾಜಧಾನಿ ಬೆಂಗಳೂರಿನಲ್ಲಿ ನಮ್ಮ ಮೆಟ್ರೋ ಸಂಚಾರ ವಿಸ್ತರಿತ ಮಾರ್ಗದಲ್ಲಿ ಸಿಗ್ನಲಿಂಗ್ ಸೇರಿದಂತೆ ಇತರೆ ಕಾಮಗಾರಿಗಳು ನಡೆಯಲಿವೆ. ಹಾಗಾಗಿ, ಆ.10, 11 ಹಾಗೂ 14 ರಂದು ನೇರಳೆ ಮಾರ್ಗದ ಮೆಟ್ರೋ ರೈಲು ಸೇವೆಗಳಲ್ಲಿ ವ್ಯತ್ಯಯ ಉಂಟಾಗಲಿದೆ.

ಆ. 10, 11 ಹಾಗೂ 14ರಂದು ಬೆಳಗ್ಗೆ 5 ಗಂಟೆಯಿಂದ 7 ಗಂಟೆಯವರೆಗೆ ನೇರಳೆ ಮಾರ್ಗದ ಮೆಟ್ರೋ ರೈಲು ಸೇವೆಗಳಲ್ಲಿ ಬದಲಾವಣೆಯಿರಲಿದೆ ಎಂದು ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್) ಪ್ರಕಟಣೆ ಮೂಲಕ ತಿಳಿಸಿದೆ.

"ಬೈಯಪ್ಪನಹಳ್ಳಿಯಿಂದ ಕೃಷ್ಣರಾಜಪುರ ಮೆಟ್ರೋ ನಿಲ್ದಾಣದವರೆಗೆ ಮೆಟ್ರೋ ಸೇವೆಗಳನ್ನು ವಿಸ್ತರಿಸುವ ಸಲುವಾಗಿ, ನಿಗಮವು ಆ.9 ರವರೆಗೆ ಬೈಯಪ್ಪನಹಳ್ಳಿ ಟರ್ಮಿನಲ್‌ನಿಂದ ಸ್ವಾಮಿ ವಿವೇಕಾನಂದ ರಸ್ತೆ ಮೆಟ್ರೋ ನಿಲ್ದಾಣ ಹಾಗೂ ಕೃಷ್ಣರಾಜಪುರ ಮತ್ತು ವೈಟ್‌ಫೀಲ್ಡ್ (ಕಾಡುಗೋಡಿ) ನಿಲ್ದಾಣಗಳವರೆಗೆ ಬೆಳಗ್ಗೆ 5 ಗಂಟೆಯಿಂದ 7 ಗಂಟೆಯವರೆಗೆ ಸಿಗ್ನಲಿಂಗ್ ಮತ್ತು ಇತರ ಸಂಬಂಧಿತ ಕಾಮಗಾರಿಗಾಗಿ ರೈಲು ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ" ಎಂದು ತಿಳಿಸಿದೆ. "ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಎರಡು ದಿನ ಕಾಲಾವಕಾಶ ಬೇಕಾಗಿದ್ದು, ಆ.10 ಮತ್ತು 11 ರವರೆಗೆ ರೈಲು ಸಂಚಾರ ಸ್ಥಗಿತ ಇರಲಿದೆ. ಬೆಳಗ್ಗೆ 5 ಗಂಟೆಯಿಂದ 7 ಗಂಟೆಯವರೆಗೆ ಸ್ವಾಮಿ ವಿವೇಕಾನಂದ ರಸ್ತೆ ಮೆಟ್ರೋ ನಿಲ್ದಾಣದಿಂದ ಕೆಂಗೇರಿ ನಿಲ್ದಾಣದವರೆಗೆ ಮೆಟ್ರೋ ರೈಲು ಸೇವೆಗಳು ಲಭ್ಯವಿರುತ್ತದೆ" ಎಂದು ತಿಳಿಸಿದೆ.

"ಕೆಂಗೇರಿ ನಿಲ್ದಾಣದಿಂದ ಚಲ್ಲಘಟ್ಟ ನಿಲ್ದಾಣದವರೆಗೆ ರೈಲು ಸೇವೆಯನ್ನು ವಿಸ್ತರಿಸಲು ಸಿಗ್ನಲಿಂಗ್ ಮತ್ತು ಇತರ ಸಂಬಂಧಿತ ಕಾಮಗಾರಿಗಳು ನಡೆಯುತ್ತಿವೆ. ಹಾಗಾಗಿ, ಆ.14 ರಂದು ಬೆಳಗ್ಗೆ 5 ಗಂಟೆಯಿಂದ 7 ಗಂಟೆಯವರೆಗೆ ಕೆಂಗೇರಿ ಮತ್ತು ವಿಜಯನಗರ ಮೆಟ್ರೋ ನಿಲ್ದಾಣಗಳ ನಡುವೆ ಮೆಟ್ರೋ ಸೇವೆ ಇರುವುದಿಲ್ಲ. ಈ ಸಮಯದಲ್ಲಿ ಬೈಯಪ್ಪನಹಳ್ಳಿ ಮತ್ತು ವಿಜಯನಗರ ಮೆಟ್ರೋ ನಿಲ್ದಾಣಗಳ ನಡುವೆ ರೈಲು ಸೇವೆ ಇರುತ್ತದೆ ಎಂದು ಹೇಳಿದೆ.

# ಮನೆ ಬಾಡಿಗೆ ಕೇಳಿದ್ದಕ್ಕೆ ಚಾಕುವಿನಿಂದ ಹಲ್ಲೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬಾಡಿಗೆ ಹಣ ಕೇಳಿದಕ್ಕೆ ಮಹಿಳೆ ಮೇಲೆ ಚಾಕುವಿನಿಂದ ಇರಿದು ಹಲ್ಲೆ ಮಾಡಿರುವ ಘಟನೆ ಬಂಡೇಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಶ್ರೀದೇವಿ ಹಲ್ಲೆಗೊಳಗಾದ ಮಹಿಳೆ. ಸದ್ದಾಂ ಹಲ್ಲೆ ಮಾಡಿದ ವ್ಯಕ್ತಿ. ಮುನೇಶ್ವರನಗರದಲ್ಲಿರುವ ಕಟ್ಟಡವೊಂದರಲ್ಲಿ ಹಲ್ಲೆಗೊಳಗಾದ ಮಹಿಳೆ ಬಾಡಿಗೆ ಮನೆಯಲ್ಲಿದ್ದರು. ಈ ಕಟ್ಟಡ ಮಾಲೀಕ ಫಯಾಜ್ ಹಾಗೂ ಆತನ ಕುಟುಂಬ ವಿದೇಶದಲ್ಲಿದ್ದರು. ನಗರದಲ್ಲಿರುವ ಮನೆಗಳ ಬಾಡಿಗೆ ಹಣ ಸಂಗ್ರಹಿಸಿ ಫಯಾಜ್ ಅವರಿಗೆ ಕಳುಹಿಸುವ ಜವಾಬ್ದಾರಿಯನ್ನು ಶ್ರೀದೇವಿ ಅವರಿಗೆ ನೀಡಲಾಗಿತ್ತು. ಅದರಂತೆಯೇ ಪ್ರತಿ ತಿಂಗಳು ಶ್ರೀದೇವಿ ಹಣ ಸಂಗ್ರಹಿಸುತ್ತಿದ್ದರು.



ಅದೇ ಕಟ್ಟಡದಲ್ಲಿ ವಾಸವಿದ್ದ ನಜೀರ್ ಎಂಬ ಕುಟುಂಬದವರು ಕಳೆದ ಮೂರು ತಿಂಗಳಿನಿಂದ ಬಾಡಿಗೆ ಹಣ ನೀಡಿರಲಿಲ್ಲ. ಹಾಗಾಗಿ ಶ್ರೀದೇವಿ ಬಾಡಿಗೆ ಹಣ ನೀಡುವಂತೆ ಜೋರು ಧ್ವನಿಯಲ್ಲಿ ಕೇಳಿದ್ದಾರೆ. ಈ ಘಟನೆಯನ್ನು ನಜೀರ್ ಅವರ ಮಗ ಸದ್ದಾಂಗೆ ತಿಳಿಸಿದ್ದಾರೆ. ಇದಕ್ಕೆ ಕೋಪಗೊಂಡ ಸದ್ದಾಂ ಶ್ರೀದೇವಿ ಅವರ ಮನೆ ಮುಂದೆ ಹೋಗಿ ಕೂಗಾಡಿದ್ದಾನೆ. ಅಲ್ಲದೆ, ಅವರ ಮೇಲೆ ಚಾಕುವಿನಿಂದ ಇರಿದು ಹಲ್ಲೆ ಮಾಡಿದ್ದಾನೆ. ಘಟನೆ ನಡೆದು ಒಂದು ತಿಂಗಳು ಕಳೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಹಲ್ಲೆಗೊಳಗಾದ ಶ್ರೀದೇವಿ ಅವರು ಬಂಡೇಪಾಳ್ಯ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಆರೋಪಿ ವಿರುದ್ಧ ಕೊಲೆಯತ್ನದ ಸೆಕ್ಷನ್ ದಾಖಲಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿದ್ದಾರೆ.

# ಮುಸ್ಲಿಮರ ರಕ್ಷಣೆಗೆ ನಿಲ್ಲುವುದಾಗಿ ನಿರ್ಣಯ ತೆಗೆದುಕೊಂಡ ರೈತ ಮುಖಂಡರು

■ವಿಜಯಸಾಕ್ಷಿ ಸುದ್ದಿ, ಹರ್ಯಾಣ

ಹರ್ಯಾಣದ ನುಹ್ ಜಿಲ್ಲೆಯಲ್ಲಿ ಹಿಂಸಾಚಾರದ ಬಳಿಕ ಮುಸ್ಲಿಮರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಕರೆ ನೀಡಿದ್ದ ಬೆಳವಣಿಗೆಯ ಬೆನ್ನಲ್ಲೇ ಮತ್ತೊಂದು ಮಹತ್ವದ ಬೆಳವಣಿಗೆ ನಡೆದಿದೆ.

ಮುಸ್ಲಿಂ ಸಮುದಾಯದವರು ಇಲ್ಲೇ ಇರುತ್ತಾರೆ, ಅವರ ಮೇಲೆ ದೌರ್ಜನ್ಯಕ್ಕೆ ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ಹರಿಯಾಣದ ರೈತ ಸಂಘಟನೆಗಳು ಮತ್ತು ಖಾಪ್ ಪಂಚಾಯತ್‌ಗಳ ಮುಖಂಡರು ಘೋಷಿಸಿದ್ದಾರೆ.

ರಾಜ್ಯದಲ್ಲಿನ ಕೋಮು ಗಲಭೆಯನ್ನು ತಡೆಯಲು ಸಂಕಲ್ಪ ಮಾಡುವ ಉದ್ದೇಶದಿಂದ ರೈತರು ಹಿಸಾರ್‌ನ ಬಾಸ್ ಗ್ರಾಮದಲ್ಲಿ ಜಮಾಯಿಸಿದ್ದರು.

ಹಿಂದೂ, ಮುಸ್ಲಿಂ ಮತ್ತು ಸಿಖ್ ಸಮುದಾಯಗಳ ಸುಮಾರು 2,000 ರೈತರು ರೈತ ಪಂಚಾಯತ್ ನಲ್ಲಿ ಪಾಲ್ಗೊಂಡಿದ್ದರು. ಹಿಂಸಾಚಾರದ ನಂತರ ಹರಿಯಾಣದಲ್ಲಿ ಇದೇ ಮೊದಲ ಬಾರಿಗೆ ಒಗ್ಗಟ್ಟನ್ನು ಪ್ರದರ್ಶಿಸಲು ರೈತರು ಮುಂದಾಗಿದ್ದಾರೆ.

ಹರ್ಯಾಣದಲ್ಲಿ ಮುಸ್ಲಿಮರಿಗೆ ಬೆದರಿಕೆಗಳು ಮತ್ತು ಅಲ್ಪಸಂಖ್ಯಾತ ಸಮುದಾಯದ ಸದಸ್ಯರಿಗೆ ತಮ್ಮ ಗ್ರಾಮಗಳ ಪ್ರವೇಶದ ವಿರುದ್ಧ ಕೆಲವು ಗ್ರಾಮ ಪಂಚಾಯತ್‌ಗಳು ನಿರ್ಣಯ ಕೈಗೊಂಡಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ರೈತ ಮುಖಂಡ ಸುರೇಶ್ ಕೋತ್ ಈ ಕುರಿತು ಮಾತನಾಡಿ, ಮುಸ್ಲಿಮರು ಇಲ್ಲೇ ಇರುತ್ತಾರೆ, ಯಾರೂ ಅವರನ್ನು ಮುಟ್ಟುವಂತಿಲ್ಲ. ಎಲ್ಲಾ ರೈತರು ಅವರ ರಕ್ಷಣೆಗೆ ಜವಾಬ್ದಾರರು. ಕೆಲವು ಹಳ್ಳಿಗಳಲ್ಲಿ ಮುಸ್ಲಿಮರ ಪ್ರವೇಶ ನಿಷೇಧದ ಬಗ್ಗೆ ವರದಿಗಳು ಸುಳ್ಳು ಎಂದು ಅವರು ಇದೇ ವೇಳೆ ಹೇಳಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka